सत्यमेव जयते

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಮಾನವ ಅಂಗಾಂಗಗಳ ಕಸಿ ಅಧಿನಿಯಮ, 1994

(1994ರ ಅಧಿನಿಯಮ ಸಂಖ್ಯೆ 42)

[25ನೇ ಏಪ್ರಿಲ್, 2011 ರಂದು ಜಾರಿಯಲ್ಲಿದ್ದಂತೆ]

# THE TRANSPLANTATION OF HUMAN ORGANS ACT, 1994

(Act No. 42 OF 1994)

[As on 25th April, 2011]

# ಮುನ್ನುಡಿ

25.04.2011 ರಂದು ಜಾರಿಯಲ್ಲಿದ್ದಂತೆ, ದಿ ಟ್ರಾನ್ಸ್‌ಪ್ಲಂಟೇಷನ್ ಆಫ್ ಹ್ಯೂಮನ್ ಆರ್ಗನ್ಸ್ ಆ್ಯಕ್ಟ್, 1994 (1994ರ 42) ಇದರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 25.04.2011ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 45ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 20 ರಿಂದ 33 ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

**ವಿ.ಕೆ. ಭಸೀನ್**
ಕಾರ್ಯದರ್ಶಿ
ಭಾರತ ಸರ್ಕಾರ.

ನವದೆಹಲಿ
ದಿನಾಂಕ:

## PREFACE

This edition of the Transplantation of Human Organs Act, 1994 (42 of 1994) as on the 25.04.2011 contains the authoritative text of that Act in Kannada which was published in the Gazette of India Extraordinary, Part IX, Section 1, No.1, Vol. 45, dated 25.04.2011 on pages 20 to 33.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

New Delhi
Date :

**V.K. BHASIN**
Secretary,
Government of India.

# ಮಾನವ ಅಂಗಾಂಗಗಳ ಕಸಿ ಅಧಿನಿಯಮ, 1994

## ಪ್ರಕರಣಗಳ ಅನುಕ್ರಮಣಿಕೆ:

**ಪ್ರಕರಣಗಳು:** **ಪುಟಗಳು**

### ಅಧ್ಯಾಯ – I
### ಪ್ರಾರಂಭಿಕ


1. ಚಿಕ್ಕ ಹೆಸರು, ಅನ್ವಯ ಮತ್ತು ಪ್ರಾರಂಭ 1
2. ಪರಿಭಾಷೆ 2


### ಅಧ್ಯಾಯ – II
### ಮಾನವ ಅಂಗಾಂಗಗಳನ್ನು ತೆಗೆಯುವುದಕ್ಕಾಗಿ ಅಧಿಕಾರ ನೀಡಿಕೆ


3. ಮಾನವ ಅಂಗಾಂಗಗಳನ್ನು ತೆಗೆಯುವುದಕ್ಕಾಗಿ ಅಧಿಕಾರ ನೀಡಿಕೆ 5
4. ಕೆಲವು ಸಂದರ್ಭಗಳಲ್ಲಿ ಮಾನವ ಅಂಗಾಂಗಗಳನ್ನು ತೆಗೆಯುವುದಕ್ಕೆ ಅಧಿಕಾರ ನೀಡಬಾರದು 7
5. ಆಸ್ಪತ್ರೆಯಲ್ಲಿ ಅಥವಾ ಬಂದೀಖಾನೆಯಲ್ಲಿ ಮೃತ ದೇಹಗಳನ್ನು ಕ್ಲೇಮುಮಾಡದ ಸಂದರ್ಭದಲ್ಲಿ ಮಾನವ ಅಂಗಾಂಗಗಳನ್ನು ತೆಗೆಯುವುದಕ್ಕೆ ಅಧಿಕಾರ ನೀಡುವುದು 7
6. ವೈದ್ಯ–ಕಾನೂನಿನ ಅಥವಾ ರೋಗಲಕ್ಷಣ ಶಾಸ್ತ್ರದ ಉದ್ದೇಶಗಳಿಗಾಗಿ ಮರಣೋತ್ತರ ಪರೀಕ್ಷೆಗೆ ಕಳುಹಿಸಿದ ದೇಹಗಳಿಂದ ಮಾನವ ಅಂಗಾಂಗಗಳನ್ನು ತೆಗೆಯುವುದಕ್ಕಾಗಿ ಅಧಿಕಾರ ನೀಡುವುದು 8
7. ಮಾನವ ಅಂಗಾಂಗಗಳ ಸಂರಕ್ಷಣೆ 9
8. ಉಳಿಸುವಿಕೆಗಳು 9
9. ಮಾನವ ಅಂಗಾಂಗಗಳನ್ನು ತೆಗೆಯುವುದರ ಮತ್ತು ಕಸಿ ಮಾಡುವುದರ ಬಗ್ಗೆ ನಿರ್ಬಂಧಗಳು 9


### ಅಧ್ಯಾಯ – III
### ಆಸ್ಪತ್ರೆಗಳ ವಿನಿಯಮನ


10. ಮಾನವ ಅಂಗಾಂಗಗಳನ್ನು ತೆಗೆಯುವ, ಸಂಗ್ರಹಿಸುವ ಅಥವಾ ಕಸಿ ಮಾಡುವ ಆಸ್ಪತ್ರೆಗಳ ವಿನಿಯಮನ 10
11. ಚಿಕಿತ್ಸೆಯ ಉದ್ದೇಶಗಳ ಹೊರತು ಬೇರೆ ಯಾವುದೇ ಉದ್ದೇಶಕ್ಕಾಗಿ ಮಾನವ ಅಂಗವನ್ನು ತೆಗೆಯುವುದಕ್ಕೆ ಅಥವಾ ಕಸಿ ಮಾಡುವುದಕ್ಕೆ ನಿಷೇಧ 11
12. ದಾನಿಗೆ ಮತ್ತು ತೆಗೆದುಕೊಂಡವನಿಗೆ, ಪರಿಣಾಮಗಳು, ಮುಂತಾದವುಗಳನ್ನು ವಿವರಿಸುವುದು 12

## ಅಧ್ಯಾಯ – IV
### ಸಮುಚಿತ ಪ್ರಾಧಿಕಾರ

13. ಸಮುಚಿತ ಪ್ರಾಧಿಕಾರ 12

## ಅಧ್ಯಾಯ – V
### ಆಸ್ಪತ್ರೆಗಳ ನೋಂದಣಿ

14. ಮಾನವ ಅಂಗಾಂಗಗಳನ್ನು ತೆಗೆಯುವ, ಸಂಗ್ರಹಿಸುವ ಅಥವಾ ಕಸಿ ಮಾಡುವ ಕಾರ್ಯದಲ್ಲಿ ತೊಡಗಿರುವ ಆಸ್ಪತ್ರೆಯ ನೋಂದಣಿ 13
15. ನೋಂದಣಿ ಪ್ರಮಾಣ ಪತ್ರ 14
16. ನೋಂದಣಿಯ ಅಮಾನತು ಅಥವಾ ರದ್ದು 15
17. ಅಪೀಲುಗಳು 15

## ಅಧ್ಯಾಯ – VI
### ಅಪರಾಧಗಳು ಮತ್ತು ದಂಡನೆಗಳು

18. ಅಧಿಕಾರವಿಲ್ಲದೆ ಮಾನವ ಅಂಗವನ್ನು ತೆಗೆಯುವುದಕ್ಕೆ ಶಿಕ್ಷೆ 16
19. ಮಾನವ ಅಂಗಾಂಗಗಳ ವಾಣಿಜ್ಯ ವ್ಯವಹಾರ ಮಾಡುವುದಕ್ಕೆ ದಂಡನೆ 16
20. ಈ ಅಧಿನಿಯಮದ ಯಾವುದೇ ಇತರ ಉಪಬಂಧದ ಉಲ್ಲಂಘನೆಗಾಗಿ ದಂಡನೆ 18
21. ಕಂಪನಿಗಳಿಂದ ಅಪರಾಧಗಳು 18
22. ಅಪರಾಧದ ಸಂಜ್ಞೇಯತೆ 19

## ಅಧ್ಯಾಯ VII
### ಸಂಕೀರ್ಣ

23. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ 20
24. ನಿಯಮಗಳನ್ನು ರಚಿಸುವ ಅಧಿಕಾರ 20
25. ನಿರಸನ ಮತ್ತು ಉಳಿಸುವಿಕೆಗಳು 23

# ಮಾನವ ಅಂಗಾಂಗಗಳ ಕಸಿ ಅಧಿನಿಯಮ, 1994

## (1994 ರ ಅಧಿನಿಯಮ ಸಂಖ್ಯೆ 42)

[8ನೇ ಜುಲೈ, 1994]

ಮಾನವ ಅಂಗಾಂಗಗಳನ್ನು ಚಿಕಿತ್ಸೆಯ ಉದ್ದೇಶಗಳಿಗಾಗಿ ತೆಗೆಯುವುದನ್ನು, ಸಂಗ್ರಹಣೆ ಮಾಡುವುದನ್ನು ಮತ್ತು ಕಸಿ ಮಾಡುವುದನ್ನು ವಿನಿಯಮನಗೊಳಿಸುವುದಕ್ಕಾಗಿ ಹಾಗೂ ಮಾನವ ಅಂಗಾಂಗಗಳ ವಾಣಿಜ್ಯ ವ್ಯವಹಾರಗಳನ್ನು ಪ್ರತಿಬಂಧಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಮಾನವ ಅಂಗಾಂಗಗಳನ್ನು ಚಿಕಿತ್ಸೆಯ ಉದ್ದೇಶಗಳಿಗಾಗಿ ತೆಗೆಯುವುದನ್ನು, ಸಂಗ್ರಹಣೆ ಮಾಡುವುದನ್ನು ಮತ್ತು ಕಸಿ ಮಾಡುವುದನ್ನು ವಿನಿಯಮನಗೊಳಿಸುವುದಕ್ಕಾಗಿ ಹಾಗೂ ಮಾನವ ಅಂಗಾಂಗಗಳ ವಾಣಿಜ್ಯ ವ್ಯವಹಾರಗಳನ್ನು ತಡೆಗಟ್ಟುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಮತ್ತು, ಸಂವಿಧಾನದ 249 ಹಾಗೂ 250ನೇ ಅನುಚ್ಛೇದಗಳಲ್ಲಿ ಉಪಬಂಧಿಸಿದಂತೆ ಹೊರತು, ಮೇಲೆ ಹೇಳಿದ ವಿಷಯಗಳಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯಗಳಿಗಾಗಿ ಕಾನೂನುಗಳನ್ನು ರಚಿಸಲು ಸಂಸತ್ತಿಗೆ ಅಧಿಕಾರವಿಲ್ಲದಿರುವುದರಿಂದ;

ಮತ್ತು, ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡಕ್ಕೆ ಅನುಸಾರವಾಗಿ, ಗೋವಾ, ಹಿಮಾಚಲಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ವಿಧಾನ ಮಂಡಲಗಳ ಎಲ್ಲಾ ಸದನಗಳು, ಆ ರಾಜ್ಯಗಳಲ್ಲಿ ಮೇಲೆ ಹೇಳಿದ ವಿಷಯಗಳನ್ನು ಕಾನೂನಿನ ಮೂಲಕ ಸಂಸತ್ತು ವಿನಿಯಮನಗೊಳಿಸಬೇಕೆಂಬ ಬಗ್ಗೆ ನಿರ್ಣಯಗಳನ್ನು ಅಂಗೀಕರಿಸಿರುವುದರಿಂದ;

ಅದು, ಭಾರತ ಗಣರಾಜ್ಯದ ನಲವತ್ತೈದನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:–

## ಅಧ್ಯಾಯ – I
## ಪ್ರಾರಂಭಿಕ

**1. ಚಿಕ್ಕ ಹೆಸರು, ಅನ್ವಯ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಮಾನವ ಅಂಗಾಂಗಗಳ ಕಸಿ ಅಧಿನಿಯಮ, 1994 ಎಂದು ಕರೆಯತಕ್ಕದ್ದು.

(2) ಮೊದಲನೆಯದಾಗಿ, ಇದು ಇಡೀ ಗೋವಾ, ಹಿಮಾಚಲಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಮತ್ತು ಎಲ್ಲಾ ಒಕ್ಕೂಟ ರಾಜ್ಯ ಕ್ಷೇತ್ರಗಳಿಗೆ ಅನ್ವಯವಾಗುತ್ತದೆ ಮತ್ತು ಇದು ಸಂವಿಧಾನದ 252 ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ಆ ಬಗ್ಗೆ ಅಂಗೀಕರಿಸಿದ ನಿರ್ಣಯದ ಮೂಲಕ ಈ ಅಧಿನಿಯಮವನ್ನು ಅಳವಡಿಸಿಕೊಳ್ಳುವಂಥ ಇತರ ರಾಜ್ಯಗಳಿಗೂ ಕೂಡ ಅನ್ವಯವಾಗತಕ್ಕದ್ದು.

(3) ಇದು ಗೋವಾ, ಹಿಮಾಚಲಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಹಾಗೂ ಎಲ್ಲಾ ಒಕ್ಕೂಟ ರಾಜ್ಯ ಕ್ಷೇತ್ರಗಳಲ್ಲಿ, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1]ದಿನಾಂಕದಂದು ಮತ್ತು ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ಈ ಅಧಿನಿಯಮವನ್ನು ಅಳವಡಿಸಿಕೊಳ್ಳುವಂಥ ಯಾವುದೇ ಇತರ ರಾಜ್ಯದಲ್ಲಿ ಅಂಥ ಅಳವಡಿಕೆಯ ದಿನಾಂಕದಂದು ಜಾರಿಗೆ ಬರತಕ್ಕದ್ದು; ಮತ್ತು ಯಾವುದೇ ರಾಜ್ಯ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಈ ಅಧಿನಿಯಮದ ಪ್ರಾರಂಭಕ್ಕೆ ಈ ಅಧಿನಿಯಮದಲ್ಲಿ ಮಾಡಿರುವ ಯಾವುದೇ ಉಲ್ಲೇಖ ಎಂದರೆ ಅಂಥ ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಈ ಅಧಿನಿಯಮವು ಜಾರಿಗೆ ಬರುವ ದಿನಾಂಕ.

**2. ಪರಿಭಾಷೆ.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಜಾಹೀರಾತು" ಎಂಬುದು, ಸಾಮಾನ್ಯವಾಗಿ ಸಾರ್ವಜನಿಕರಿಗಾಗಲಿ ಅಥವಾ ಸಾರ್ವಜನಿಕರ ಯಾವುದೇ ವರ್ಗಕ್ಕಾಗಲಿ ಅಥವಾ ಆಯ್ದ ವ್ಯಕ್ತಿಗಳಿಗೆ ವ್ಯಕ್ತಿಗತವಾಗಿಯಾಗಲಿ ಜಾಹೀರಾತು ನೀಡುವ ಯಾವುದೇ ನಮೂನೆಯನ್ನು ಒಳಗೊಳ್ಳುತ್ತದೆ;

(ಬಿ) "ಸಮುಚಿತ ಪ್ರಾಧಿಕಾರ" ಎಂದರೆ 13ನೇ ಪ್ರಕರಣದ ಮೇರೆಗೆ ನೇಮಕ ಮಾಡಿದ ಸಮುಚಿತ ಪ್ರಾಧಿಕಾರ;

(ಸಿ) "ಅಧಿಕಾರ ನೀಡಿಕೆ ಸಮಿತಿ" ಎಂದರೆ 9ನೇ ಪ್ರಕರಣದ (4)ನೇ ಉಪಪ್ರಕರಣದ (ಎ) ಖಂಡದ ಅಥವಾ (ಬಿ) ಖಂಡದ ಮೇರೆಗೆ ರಚಿತವಾದ ಸಮಿತಿ;

---

1. ಈ ಅಧಿನಿಯಮವು ಗೋವಾ, ಹಿಮಾಚಲಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಮತ್ತು ಎಲ್ಲ ಒಕ್ಕೂಟ ರಾಜ್ಯಕ್ಷೇತ್ರಗಳಲ್ಲಿ ದಿನಾಂಕ 4.2.1995 ರಿಂದ ಜಾರಿಗೆ ಬರತಕ್ಕದ್ದು. ಅಧಿಸೂಚನೆ ಸಂ. ಎಸ್.ಓ. 80 (ಇ) ದಿನಾಂಕ 4.2.1995 ನೋಡಿ.

(ಡಿ) "ಮಿದುಳು – ಕಾಂಡ ಸಾವು" ಎಂದರೆ ಯಾವ ಹಂತದಲ್ಲಿ ಮಿದುಳು – ಕಾಂಡದ ಎಲ್ಲಾ ಕಾರ್ಯನಿರ್ವಹಣೆಗಳು ಶಾಶ್ವತವಾಗಿ ಮತ್ತು ಪೂರ್ವಾವಸ್ಥೆಗೆ ತರಲಾಗದಂತೆ ನಿಂತುಹೋಗಿವೆಯೋ ಮತ್ತು 3ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಹಾಗೆಂದು ಪ್ರಮಾಣೀಕರಿಸಲಾಗಿದೆಯೋ ಆ ಹಂತ;

(ಇ) "ಮೃತ ವ್ಯಕ್ತಿ" ಎಂದರೆ ಜೀವಂತವಾಗಿ ಜನ್ಮ ಪಡೆದ ನಂತರ ಯಾವುದೇ ಕಾಲದಲ್ಲಿ ಮಿದುಳು– ಕಾಂಡದ ಸಾವಿನ ಅಥವಾ ಹೃದಯ ಶ್ವಾಸಕೋಶನಾಳವು ಸ್ಥಗಿತವಾಗುವ ಕಾರಣದಿಂದ, ಜೀವ ಇರುವ ಬಗ್ಗೆ ಯಾವ ಕುರುಹುಗಳೂ ಒಬ್ಬ ವ್ಯಕ್ತಿಯಲ್ಲಿ ಶಾಶ್ವತವಾಗಿ ಕಾಣದಂತಾಗುತ್ತವೆಯೋ ಆ ವ್ಯಕ್ತಿ;

(ಎಫ್) "ದಾನಿ" ಎಂದರೆ 3ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಚಿಕಿತ್ಸೆಯ ಉದ್ದೇಶಗಳಿಗಾಗಿ ತನ್ನ ದೇಹದ ಯಾವುದೇ ಅಂಗವನ್ನು ತೆಗೆಯಲು ಸ್ವಯಿಚ್ಛೆಯಿಂದ ಅಧಿಕಾರ ನೀಡುವ, ಹದಿನೆಂಟು ವರ್ಷ ವಯಸ್ಸಿಗಿಂತ ಕಡಿಮೆಯಲ್ಲದ ಯಾರೇ ವ್ಯಕ್ತಿ;

(ಜಿ) "ಆಸ್ಪತ್ರೆ" ಎಂಬುದು ನರ್ಸಿಂಗ್ ಹೋಂ, ಕ್ಲಿನಿಕ್, ವೈದ್ಯಕೀಯ ಕೇಂದ್ರ, ಚಿಕಿತ್ಸೆಯ ಉದ್ದೇಶಗಳಿಗಾಗಿ ಇರುವ ವೈದ್ಯಕೀಯ ಅಥವಾ ಬೋಧನ ಸಂಸ್ಥೆ ಮತ್ತು ಅಂತಹ ಇತರ ಸಂಸ್ಥೆಯನ್ನು ಒಳಗೊಳ್ಳುತ್ತದೆ;

(ಹೆಚ್) "ಮಾನವ ಅಂಗ" ಎಂದರೆ ಯಾವ ಜೀವಕೋಶಗಳನ್ನು ಸಂಪೂರ್ಣವಾಗಿ ತೆಗೆದು ಹಾಕಿದರೆ, ದೇಹವು ಅದನ್ನು ಪುನರ್ ಉತ್ಪತ್ತಿಮಾಡಲು ಸಾಧ್ಯವಾಗುವುದಿಲ್ಲವೋ ಆ ಜೀವಕೋಶಗಳ ರಚನಾತ್ಮಕ ವ್ಯವಸ್ಥೆಯನ್ನು ಒಳಗೊಂಡ ಮಾನವ ದೇಹದ ಯಾವುದೇ ಭಾಗ;

(ಐ) "ಹತ್ತಿರದ ಸಂಬಂಧಿ" ಎಂದರೆ ಗಂಡ/ ಹೆಂಡತಿ, ಮಗ, ಮಗಳು, ತಂದೆ, ತಾಯಿ, ಸಹೋದರ ಅಥವಾ ಸಹೋದರಿ;

(ಜೆ) "ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಕೆ) "ಸಂದಾಯ" ಎಂದರೆ ಹಣದ ರೂಪದ ಅಥವಾ ಹಣದ ಮೌಲ್ಯಕ್ಕೆ ಸಮನಾದ ಸಂದಾಯ, ಆದರೆ ಅದು,–

(i) ಕೊಡಲಿರುವ ಮಾನವ ಅಂಗವನ್ನು ತೆಗೆಯುವ, ಸಾಗಿಸುವ ಅಥವಾ ಸಂರಕ್ಷಿಸಿಡುವ ಖರ್ಚನ್ನು; ಅಥವಾ

(ii) ಒಬ್ಬ ವ್ಯಕ್ತಿಯು ತನ್ನ ದೇಹದಿಂದ ಯಾವುದೇ ಮಾನವ ಅಂಗವನ್ನು ಕೊಟ್ಟಿದ್ದರಿಂದಾಗಿ ಅವನಿಗೆ ಯಾವ ವೆಚ್ಚಗಳ ಅಥವಾ ಗಳಿಕೆಯ ನಷ್ಟವು ಉಂಟಾಗಿದೆಯೆಂದು ಯುಕ್ತವಾಗಿ ಮತ್ತು ನೇರವಾಗಿ ಹೇಳಬಹುದಾಗಿದೆಯೋ ಆ ಯಾವುವೇ ವೆಚ್ಚಗಳನ್ನು ಅಥವಾ ಗಳಿಕೆಗಳ ನಷ್ಟವನ್ನು

– ಭರಿಸುವುದಕ್ಕಾಗಿ ಅಥವಾ ತುಂಬಿಕೊಡುವುದಕ್ಕಾಗಿ ಮಾಡಿದ ಯಾವುದೇ ಸಂದಾಯವನ್ನು ಒಳಗೊಳ್ಳುವುದಿಲ್ಲ;

(ಎಲ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಂ) "ತೆಗೆದುಕೊಂಡವನು" ಎಂದರೆ ಯಾವುದೇ ಮಾನವ ಅಂಗವನ್ನು ಯಾವ ವ್ಯಕ್ತಿಯಲ್ಲಿ ಕಸಿಮಾಡಲಾಗಿದೆಯೋ ಅಥವಾ ಕಸಿ ಮಾಡಲು ಉದ್ದೇಶಿಸಲಾಗಿದೆಯೋ ಆ ವ್ಯಕ್ತಿ;

(ಎನ್) "ನೋಂದಾಯಿತ ವೈದ್ಯಕೀಯ ವೃತ್ತಿಗ" ಎಂದರೆ ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956ರ 2ನೇ ಪ್ರಕರಣದ (ಹೆಚ್) ಖಂಡದಲ್ಲಿ ಪರಿಭಾಷಿಸಲಾದಂತೆ ಯಾವುದೇ ಮನ್ನಣೆ ಪಡೆದ ವೈದ್ಯಕೀಯ ವಿದ್ಯಾರ್ಹತೆಯನ್ನು ಹೊಂದಿರುವ ಮತ್ತು ಆ ಪ್ರಕರಣದ (ಕೆ) ಖಂಡದಲ್ಲಿ ಪರಿಭಾಷಿಸಲಾದಂತೆ ರಾಜ್ಯ ವೈದ್ಯಕೀಯ ರಿಜಿಸ್ಟರಿನ ಪಟ್ಟಿಯಲ್ಲಿ ಸೇರಿದ ವೈದ್ಯಕೀಯ ವೃತ್ತಿಗ;

(ಓ) "ಚಿಕಿತ್ಸೆಯ ಉದ್ದೇಶಗಳು" ಎಂದರೆ ಯಾವುದೇ ನಿರ್ದಿಷ್ಟ ವಿಧಾನ ಅಥವಾ ಪದ್ಧತಿಯನ್ನು ಅನುಸರಿಸಿ ಯಾವುದೇ ರೋಗದ ವ್ಯವಸ್ಥಿತ ಚಿಕಿತ್ಸೆ ಅಥವಾ ಆರೋಗ್ಯವನ್ನು ಸುಧಾರಿಸುವ ಕ್ರಮಗಳು; ಮತ್ತು

(ಪಿ) "ಕಸಿ" ಎಂದರೆ ಯಾರೇ ಜೀವಂತ ವ್ಯಕ್ತಿಯಿಂದ ಅಥವಾ ಮೃತ ವ್ಯಕ್ತಿಯಿಂದ ಬೇರೊಬ್ಬ ಜೀವಂತ ವ್ಯಕ್ತಿಗೆ ಯಾವುದೇ ಮಾನವ ಅಂಗವನ್ನು ಚಿಕಿತ್ಸೆಯ ಉದ್ದೇಶಗಳಿಗಾಗಿ ಕಸಿ ಮಾಡುವುದು.

## ಅಧ್ಯಾಯ – II
## ಮಾನವ ಅಂಗಾಂಗಗಳನ್ನು ತೆಗೆಯುವುದಕ್ಕಾಗಿ ಅಧಿಕಾರ ನೀಡಿಕೆ

**3. ಮಾನವ ಅಂಗಾಂಗಗಳನ್ನು ತೆಗೆಯುವುದಕ್ಕಾಗಿ ಅಧಿಕಾರ ನೀಡಿಕೆ.–** (1) ಯಾರೇ ದಾನಿಯು, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು, ತಾನು ಮೃತನಾಗುವ ಮುಂಚೆ, ಚಿಕಿತ್ಸೆಯ ಉದ್ದೇಶಗಳಿಗಾಗಿ ತನ್ನ ದೇಹದ ಯಾವುದೇ ಮಾನವ ಅಂಗವನ್ನು ತೆಗೆಯಲು ಅಧಿಕಾರ ನೀಡಬಹುದು.

(2) ಯಾರೇ ದಾನಿಯು, ತಾನು ಮೃತನಾಗುವ ಮುಂಚೆ, ಯಾವುದೇ ಕಾಲದಲ್ಲಿ, ಲಿಖಿತದಲ್ಲಿ ಅಥವಾ ಇಬ್ಬರು ಅಥವಾ ಹೆಚ್ಚು ಸಾಕ್ಷಿದಾರರ (ಕೊನೇ ಪಕ್ಷ ಅವರಲ್ಲೊಬ್ಬರಾದರೂ ಅಂಥ ವ್ಯಕ್ತಿಯ ಹತ್ತಿರದ ಸಂಬಂಧಿಯಾಗಿರಬೇಕು) ಸಮಕ್ಷಮದಲ್ಲಿ, ತನ್ನ ಮರಣದ ನಂತರ ಚಿಕಿತ್ಸೆಯ ಉದ್ದೇಶಗಳಿಗಾಗಿ, ತನ್ನ ದೇಹದ ಯಾವುದೇ ಮಾನವ ಅಂಗವನ್ನು ತೆಗೆಯಲು ಸಂಶಯಕ್ಕೆಡೆಯಿಲ್ಲದಂತೆ ಅಧಿಕಾರ ನೀಡಿದ್ದರೆ, ದಾನಿಯ ಮೃತದೇಹದ ಕಾನೂನುಬದ್ಧ ಸ್ವಾಧೀನ ಹೊಂದಿರುವ ವ್ಯಕ್ತಿಯು, ಮೇಲೆ ಹೇಳಿದ ಅಧಿಕಾರವನ್ನು ದಾನಿಯು ತರುವಾಯ ರದ್ದುಪಡಿಸಿದ್ದನೆಂದು ನಂಬಲು ಯಾವುದೇ ಕಾರಣವನ್ನು ಅವನು ಹೊಂದಿದ್ದ ಹೊರತು, ದಾನಿಯ ಮೃತದೇಹದಿಂದ ಮಾನವ ಅಂಗವನ್ನು ಚಿಕಿತ್ಸೆಯ ಉದ್ದೇಶಕ್ಕಾಗಿ ತೆಗೆಯುವುದಕ್ಕೆ ನೋಂದಾಯಿತ ವೈದ್ಯಕೀಯ ವೃತ್ತಿಗನಿಗೆ ಎಲ್ಲಾ ಸೂಕ್ತ ಸೌಲಭ್ಯಗಳನ್ನು ಒದಗಿಸತಕ್ಕದ್ದು.

(3) ಯಾರೇ ವ್ಯಕ್ತಿಯು ತಾನು ಮೃತನಾಗುವುದಕ್ಕೆ ಮುಂಚೆ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದಂಥ ಅಧಿಕಾರವನ್ನು ನೀಡಿಲ್ಲದಿದ್ದಲ್ಲಿ, ಆದರೆ, ತಾನು ಮೃತನಾದ ನಂತರ ಚಿಕಿತ್ಸೆಯ ಉದ್ದೇಶಗಳಿಗಾಗಿ ತನ್ನ ಯಾವುದೇ ಮಾನವ ಅಂಗಾಂಗಗಳನ್ನು ಬಳಸಿಕೊಳ್ಳುವುದಕ್ಕೆ ತನ್ನ ಆಕ್ಷೇಪಣೆಯಿಲ್ಲವೆಂಬುದನ್ನು ಅಂಥ ವ್ಯಕ್ತಿಯು ವ್ಯಕ್ತಪಡಿಸಿದ್ದರೆ, ಅಂಥ ವ್ಯಕ್ತಿಯ ಮೃತದೇಹದ ಕಾನೂನುಬದ್ಧ ಸ್ವಾಧೀನ ಹೊಂದಿರುವ ವ್ಯಕ್ತಿಯು, ಚಿಕಿತ್ಸೆಯ ಉದ್ದೇಶಗಳಿಗಾಗಿ ಮೃತ ವ್ಯಕ್ತಿಯ ಮಾನವ ಅಂಗಾಂಗಗಳನ್ನು ಬಳಸಿಕೊಳ್ಳುವುದಕ್ಕೆ ಮೃತ ವ್ಯಕ್ತಿಯ ಯಾರೇ ಹತ್ತಿರದ ಸಂಬಂಧಿಯು ಆಕ್ಷೇಪಿಸಿದ್ದಾನೆಂದು ನಂಬಲು ಅವನು ಕಾರಣ ಹೊಂದಿರುವ ಹೊರತು, ಚಿಕಿತ್ಸೆಯ ಉದ್ದೇಶಗಳಿಗಾಗಿ ಬಳಸಿಕೊಳ್ಳವುದಕ್ಕೆ ಮೃತ ವ್ಯಕ್ತಿಯ ಯಾವುದೇ ಮಾನವ ಅಂಗವನ್ನು ತೆಗೆಯಲು ಅಧಿಕಾರ ನೀಡಬಹುದು.

(4) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಅಥವಾ ಸಂದರ್ಭಾನುಸಾರ, (3)ನೇ ಉಪಪ್ರಕರಣದ ಮೇರೆಗೆ ನೀಡಿದ ಅಧಿಕಾರವು, ಚಿಕಿತ್ಸೆಯ ಉದ್ದೇಶಗಳಿಗಾಗಿ ಮಾನವ

ಅಂಗವನ್ನು ತೆಗೆಯುವುದಕ್ಕೆ ಸಾಕಷ್ಟು ಸಮರ್ಥನೆಯಾಗಿರತಕ್ಕದ್ದು; ಆದರೆ, ನೋಂದಾಯಿತ ವೈದ್ಯಕೀಯ ವೃತ್ತಿಗನಲ್ಲದ ಯಾರೇ ವ್ಯಕ್ತಿಯು ಹಾಗೆ ತೆಗೆಯತಕ್ಕದ್ದಲ್ಲ.

(5) ಮೃತ ವ್ಯಕ್ತಿಯ ದೇಹದಿಂದ ಯಾವುದೇ ಮಾನವ ಅಂಗವನ್ನು ತೆಗೆಯಬೇಕಾದಾಗ, ನೋಂದಾಯಿತ ವೈದ್ಯಕೀಯ ವೃತ್ತಿಗನು, ಹಾಗೆ ತೆಗೆಯುವುದಕ್ಕೆ ಮುಂಚೆ, ಯಾವ ದೇಹದಿಂದ ಯಾವುದೇ ಮಾನವ ಅಂಗವನ್ನು ತೆಗೆಯಬೇಕಾಗಿದೆಯೋ ಆ ದೇಹವನ್ನು ಖುದ್ದಾಗಿ ಪರೀಕ್ಷಿಸುವ ಮೂಲಕ, ಅಂಥ ದೇಹದಲ್ಲಿ ಜೀವವಿಲ್ಲವೆಂದು ಅಥವಾ ಮಿದುಳು–ಕಾಂಡದ ಸಾವು ಎಂದು ಕಂಡುಬಂದರೆ, ಅಂಥ ಸಾವನ್ನು (6)ನೇ ಉಪಪ್ರಕರಣದ ಮೇರೆಗೆ ಪ್ರಮಾಣೀಕರಿಸಲಾಗಿದೆಯೆಂದು ಸ್ವತಃ ಮನದಟ್ಟು ಮಾಡಿಕೊಳ್ಳತಕ್ಕದ್ದು.

(6) ಮಿದುಳು–ಕಾಂಡದ ಸಾವಿನ ಸಂದರ್ಭದಲ್ಲಿ ವ್ಯಕ್ತಿಯ ದೇಹದಿಂದ ಯಾವುದೇ ಮಾನವ ಅಂಗವನ್ನು ತೆಗೆಯಬೇಕಾದಲ್ಲಿ, ಈ ಕೆಳಕಂಡ, ಎಂದರೆ:–

(i) ಯಾವ ಆಸ್ಪತ್ರೆಯಲ್ಲಿ ಮಿದುಳು–ಕಾಂಡ ಸಾವು ಸಂಭವಿಸಿದೆಯೋ ಆ ಆಸ್ಪತ್ರೆಯ ಪ್ರಭಾರದಲ್ಲಿರುವ ನೋಂದಾಯಿತ ವೈದ್ಯಕೀಯ ವೃತ್ತಿಗ;

(ii) (i)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದ ನೋಂದಾಯಿತ ವೈದ್ಯಕೀಯ ವೃತ್ತಿಗನು, ಸಮುಚಿತ ಪ್ರಾಧಿಕಾರವು ಅನುಮೋದಿಸಿದ ಹೆಸರುಗಳ ಪಟ್ಟಿಯಿಂದ, ನಾಮನಿರ್ದೇಶನ ಮಾಡಬೇಕಾದ ವಿಶೇಷತಜ್ಞನಾಗಿರುವ ಒಬ್ಬ ಸ್ವತಂತ್ರ ನೋಂದಾಯಿತ ವೈದ್ಯಕೀಯ ವೃತ್ತಿಗ;

(iii) (i)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದ ನೋಂದಾಯಿತ ವೈದ್ಯಕೀಯ ವೃತ್ತಿಗನು, ಸಮುಚಿತ ಪ್ರಾಧಿಕಾರವು ಅನುಮೋದಿಸಿದ ಹೆಸರುಗಳ ಪಟ್ಟಿಯಿಂದ ನಾಮನಿರ್ದೇಶನ ಮಾಡಬೇಕಾದ ನರರೋಗ ಶಾಸ್ತ್ರಜ್ಞ ಅಥವಾ ನರಶಸ್ತ್ರ ಚಿಕಿತ್ಸಕ; ಮತ್ತು

(iv) ಯಾವ ವ್ಯಕ್ತಿಯ ಮಿದುಳು–ಕಾಂಡ ಸಾವು ಸಂಭವಿಸಿದೆಯೋ ಆ ವ್ಯಕ್ತಿಗೆ ಚಿಕಿತ್ಸೆ ನೀಡುತ್ತಿರುವ ನೋಂದಾಯಿತ ವೈದ್ಯಕೀಯ ವೃತ್ತಿಗ

– ಇವರನ್ನೊಳಗೊಂಡ ವೈದ್ಯಕೀಯ ತಜ್ಞರ ಮಂಡಳಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳು ಮತ್ತು ಅಗತ್ಯತೆಗಳನ್ನು ಪೂರೈಸಿದ ಮೇಲೆ, ಅಂಥ ಸಾವನ್ನು ಪ್ರಮಾಣೀಕರಿಸಿದ ಹೊರತು, ಅಂಥ ಅಂಗವನ್ನು ಹಾಗೆ ತೆಗೆಯತಕ್ಕದ್ದಲ್ಲ.

(7) (3)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಹದಿನೆಂಟು ವರ್ಷಗಳ ವಯಸ್ಸಿಗಿಂತ ಕಡಿಮೆಯಿರುವ ಯಾರೇ ವ್ಯಕ್ತಿಯ ಮಿದುಳು–ಕಾಂಡ ಸಾವು ಸಂಭವಿಸಿದಲ್ಲಿ ಮತ್ತು (6)ನೇ ಉಪ–ಪ್ರಕರಣದ ಮೇರೆಗೆ ಅದನ್ನು ಪ್ರಮಾಣೀಕರಿಸಿರುವಲ್ಲಿ, ಮೃತ ವ್ಯಕ್ತಿಯ ತಂದೆ–ತಾಯಿ ಪೈಕಿ ಯಾರಾದರೂ ಮೃತ ವ್ಯಕ್ತಿಯ ದೇಹದಿಂದ ಯಾವುದೇ ಮಾನವ ಅಂಗವನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ತೆಗೆಯುವುದಕ್ಕಾಗಿ ಅಧಿಕಾರ ನೀಡಬಹುದು.

**4. ಕೆಲವು ಸಂದರ್ಭಗಳಲ್ಲಿ ಮಾನವ ಅಂಗಾಂಗಗಳನ್ನು ತೆಗೆಯುವುದಕ್ಕೆ ಅಧಿಕಾರ ನೀಡಬಾರದು.–** (1) ಮೃತ ವ್ಯಕ್ತಿಯ ದೇಹದಿಂದ ಯಾವುದೇ ಮಾನವ ಅಂಗಾಂಗವನ್ನು ತೆಗೆಯುವುದಕ್ಕಾಗಿ, ಅಂಥ ಸೌಲಭ್ಯಗಳನ್ನು ನೀಡಲು ಅಗತ್ಯಪಡಿಸಲಾದ ಅಥವಾ ಅಂಥ ಅಧಿಕಾರವನ್ನು ನೀಡಲು ಅಧಿಕೃತನಾಗಿರುವ ವ್ಯಕ್ತಿಗೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ, ಅಂಥ ದೇಹಕ್ಕೆ ಸಂಬಂಧಿಸಿದಂತೆ ಶವ ಪಂಚನಾಮೆ ಮಾಡುವುದು ಅಗತ್ಯವೆಂದು ನಂಬಲು ಕಾರಣವಿರುವಲ್ಲಿ, 3ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವುವೇ ಸೌಲಭ್ಯಗಳನ್ನು ನೀಡತಕ್ಕದ್ದಲ್ಲ ಮತ್ತು ಆ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಯಾವುದೇ ಅಧಿಕಾರವನ್ನು ನೀಡತಕ್ಕದ್ದಲ್ಲ.

(2) ಯಾವ ವ್ಯಕ್ತಿಗೆ ಮೃತ ವ್ಯಕ್ತಿಯ ದೇಹವನ್ನು ಹೂಳುವ, ಸುಡುವ ಅಥವಾ ಇತರ ಬಗೆಯಲ್ಲಿ ವಿಲೆ ಮಾಡುವ ಏಕಮಾತ್ರ ಉದ್ದೇಶಕ್ಕಾಗಿ ವಹಿಸಿಕೊಡಲಾಗಿದೆಯೋ ಆ ವ್ಯಕ್ತಿಯು, ಅಂಥ ದೇಹದಿಂದ ಯಾವುದೇ ಮಾನವ ಅಂಗವನ್ನು ತೆಗೆಯುವುದಕ್ಕೆ ಯಾವುದೇ ಅಧಿಕಾರ ನೀಡತಕ್ಕದ್ದಲ್ಲ.

**5. ಆಸ್ಪತ್ರೆಯಲ್ಲಿ ಅಥವಾ ಬಂದೀಖಾನೆಯಲ್ಲಿ ಮೃತ ದೇಹಗಳನ್ನು ಕ್ಲೇಮುಮಾಡದ ಸಂದರ್ಭದಲ್ಲಿ ಮಾನವ ಅಂಗಾಂಗಗಳನ್ನು ತೆಗೆಯುವುದಕ್ಕೆ ಅಧಿಕಾರ ನೀಡುವುದು.–** (1) ಆಸ್ಪತ್ರೆಯಲ್ಲಿ ಅಥವಾ ಬಂದೀಖಾನೆಯಲ್ಲಿ ಇಟ್ಟಿರುವ ಮತ್ತು ಸಂಬಂಧಪಟ್ಟ ವ್ಯಕ್ತಿಯು ಮರಣಹೊಂದಿದ ಕಾಲದಿಂದ ನಲವತ್ತೆಂಟು ಗಂಟೆಗಳೊಳಗೆ ಮೃತ ವ್ಯಕ್ತಿಯ ಹತ್ತಿರದ ಸಂಬಂಧಿಗಳಲ್ಲಿ ಯಾರಾದರೂ ಕ್ಲೇಮು ಮಾಡದಿರುವ ಮೃತದೇಹದ ಸಂದರ್ಭದಲ್ಲಿ, ಹಾಗೆ ಕ್ಲೇಮುಮಾಡದೆ ಉಳಿದ ಮೃತದೇಹದಿಂದ ಯಾವುದೇ ಮಾನವ ಅಂಗವನ್ನು ತೆಗೆಯುವುದಕ್ಕಾಗಿ, ತತ್ಕಾಲದಲ್ಲಿ ಆಸ್ಪತ್ರೆಯ ಅಥವಾ ಬಂದೀಖಾನೆಯ ವ್ಯವಸ್ಥಾಪನೆ ಅಥವಾ ನಿಯಂತ್ರಣದ ಪ್ರಭಾರದಲ್ಲಿರುವ ವ್ಯಕ್ತಿಯು, ಅಥವಾ ಈ ಸಂಬಂಧದಲ್ಲಿ ಅದರ

ವ್ಯವಸ್ಥಾಪನೆ ಅಥವಾ ನಿಯಂತ್ರಣದ ಪ್ರಭಾರದಲ್ಲಿರುವ ವ್ಯಕ್ತಿಯಿಂದ ಅಧಿಕೃತಗೊಂಡಿರುವ ಅಂಥ ಆಸ್ಪತ್ರೆಯ ಅಥವಾ ಬಂದೀಖಾನೆಯ ನೌಕರನು ನಿಯಮಿಸಿದ ನಮೂನೆಯಲ್ಲಿ ಅಧಿಕಾರ ನೀಡಬಹುದು.

(2) ಅಂಥ ಅಧಿಕಾರವನ್ನು ನೀಡುವುದಕ್ಕೆ ಅಧಿಕಾರ ಪಡೆದ ವ್ಯಕ್ತಿಯು, (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಮೃತ ವ್ಯಕ್ತಿಯ ದೇಹವನ್ನು ಕ್ಲೇಮು ಮಾಡಲು ಅಂಥ ಹತ್ತಿರದ ಸಂಬಂಧಿಯು ಮುಂದೆ ಬರದಿದ್ದರೂ ಕೂಡ, ಆ ಮೃತ ವ್ಯಕ್ತಿಯ ಯಾರೇ ಹತ್ತಿರದ ಸಂಬಂಧಿಯು ಮೃತ ದೇಹವನ್ನು ಕ್ಲೇಮು ಮಾಡುವ ಸಂಭವವಿದೆಯೆಂದು ನಂಬಲು ಕಾರಣವಿದ್ದರೆ, (1)ನೇ ಉಪಪ್ರಕರಣದ ಮೇರೆಗೆ ಅಧಿಕಾರ ನೀಡತಕ್ಕದ್ದಲ್ಲ.

**6. ವೈದ್ಯ–ಕಾನೂನಿನ ಅಥವಾ ರೋಗಲಕ್ಷಣ ಶಾಸ್ತ್ರದ ಉದ್ದೇಶಗಳಿಗಾಗಿ ಮರಣೋತ್ತರ ಪರೀಕ್ಷೆಗೆ ಕಳುಹಿಸಿದ ದೇಹಗಳಿಂದ ಮಾನವ ಅಂಗಾಂಗಗಳನ್ನು ತೆಗೆಯುವುದಕ್ಕಾಗಿ ಅಧಿಕಾರ ನೀಡುವುದು.–** ವ್ಯಕ್ತಿಯ ದೇಹವನ್ನು,–

(ಎ) ಅಪಘಾತ ಅಥವಾ ಯಾವುದೇ ಇತರ ಅಸಹಜ ಕಾರಣದಿಂದ ಅಂಥ ವ್ಯಕ್ತಿಯು ಮರಣ ಹೊಂದಿರುವಾಗ ವೈದ್ಯ–ಕಾನೂನಿನ ಉದ್ದೇಶಗಳಿಗಾಗಿ; ಅಥವಾ

(ಬಿ) ರೋಗ ಲಕ್ಷಣ ಶಾಸ್ತ್ರೀಯ ಉದ್ದೇಶಗಳಿಗಾಗಿ

– ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಲ್ಲಿ, ಅಂಥ ಮೃತ ದೇಹದಿಂದ ಯಾವುದೇ ಮಾನವ ಅಂಗವನ್ನು ತೆಗೆಯುವುದಕ್ಕೆ ಅಧಿಕಾರ ನೀಡಲು ಈ ಅಧಿನಿಯಮದ ಮೇರೆಗೆ ಸಕ್ಷಮನಾದ ವ್ಯಕ್ತಿಯು, ಯಾವ ಉದ್ದೇಶಕ್ಕಾಗಿ ಅಂಥ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಲಾಗಿದೆಯೋ ಆ ಉದ್ದೇಶಕ್ಕಾಗಿ ಅಂಥ ಮಾನವ ಅಂಗವು ಅಗತ್ಯವಿಲ್ಲವೆಂದು ತಾನು ನಂಬಲು ಕಾರಣವಿದ್ದರೆ, ಮೃತ ವ್ಯಕ್ತಿಯ ಆ ಮಾನವ ಅಂಗವನ್ನು ಚಿಕಿತ್ಸೆಯ ಉದ್ದೇಶಗಳಿಗಾಗಿ ತೆಗೆಯಲು ಅಧಿಕಾರ ನೀಡಬಹುದು:

ಪರಂತು, ಮೃತ ವ್ಯಕ್ತಿಯು, ತನ್ನ ಮರಣದ ನಂತರ ಚಿಕಿತ್ಸೆಯ ಉದ್ದೇಶಗಳಿಗಾಗಿ ತನ್ನ ಮಾನವ ಅಂಗಾಂಗಗಳ ಪೈಕಿ ಯಾವುದೇ ಅಂಗವನ್ನು ಉಪಯೋಗಿಸುವುದಕ್ಕೆ ಅವನು ಯಾವುದೇ ಆಕ್ಷೇಪಣೆಯನ್ನು ತನ್ನ ಮರಣಕ್ಕೆ ಮುಂಚೆ ವ್ಯಕ್ತಪಡಿಸಿರಲಿಲ್ಲವೆಂದು ಅಥವಾ ತನ್ನ ಮರಣದ ನಂತರ ಚಿಕಿತ್ಸೆಯ ಉದ್ದೇಶಗಳಿಗಾಗಿ ತನ್ನ ಮಾನವ ಅಂಗಾಂಗಗಳ ಪೈಕಿ ಯಾವುದೇ ಅಂಗವನ್ನು ಉಪಯೋಗಿಸುವುದಕ್ಕೆ ಅವನು ಅಧಿಕಾರ ನೀಡಿರುವಲ್ಲಿ ಅಂಥ ಅಧಿಕಾರವನ್ನು ಅವನ ಮರಣಕ್ಕೆ ಮುಂಚೆ ರದ್ದುಪಡಿಸಿರಲಿಲ್ಲವೆಂದು ಅವನು ಮನದಟ್ಟು ಮಾಡಿಕೊಳ್ಳಬೇಕು.

**7. ಮಾನವ ಅಂಗಾಂಗಗಳ ಸಂರಕ್ಷಣೆ.–** ಯಾರೇ ವ್ಯಕ್ತಿಯ ದೇಹದಿಂದ ಯಾವುದೇ ಮಾನವ ಅಂಗವನ್ನು ತೆಗೆದ ನಂತರ, ನೋಂದಾಯಿತ ವೈದ್ಯಕೀಯ ವೃತ್ತಿಗನು ಹಾಗೆ ತೆಗೆದ ಮಾನವ ಅಂಗದ ಸಂರಕ್ಷಣೆಗಾಗಿ ನಿಯಮಿಸಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**8. ಉಳಿಸುವಿಕೆಗಳು.–** (1) ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳಲ್ಲಿ ಇರುವುದು ಯಾವುದೂ, ಮೃತ ವ್ಯಕ್ತಿಯ ದೇಹ, ಅಥವಾ ದೇಹದ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ನಡೆಸುವ ಯಾವುದೇ ವ್ಯವಹಾರವನ್ನು ಈ ಅಧಿನಿಯಮವನ್ನು ಅಂಗೀಕರಿಸಿಲ್ಲದಿದ್ದರೆ ಅಂಥ ವ್ಯವಹಾರವು ಕಾನೂನುಬದ್ಧವಾಗಬಹುದಾಗಿದ್ದರೆ, ಅದನ್ನು ಕಾನೂನು ಬಾಹಿರಗೊಳಿಸುತ್ತದೆಂದು ಅರ್ಥೈಸತಕ್ಕದ್ದಲ್ಲ.

(2) ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಮೃತ ವ್ಯಕ್ತಿಯ ದೇಹದಿಂದ ಯಾವುದೇ ಮಾನವ ಅಂಗವನ್ನು ತೆಗೆಯುವುದಕ್ಕಾಗಿ ಯಾವುದೇ ಸೌಲಭ್ಯವನ್ನು ಅಥವಾ ಅಧಿಕಾರವನ್ನು ನೀಡುವುದು ಅಥವಾ ಅಂಥ ಅಧಿಕಾರದ ಅನುಸಾರವಾಗಿ ಮೃತ ವ್ಯಕ್ತಿಯ ದೇಹದಿಂದ ಯಾವುದೇ ಮಾನವ ಅಂಗವನ್ನು ತೆಗೆಯುವುದು ಭಾರತ ದಂಡ ಸಂಹಿತೆ (1860ರ 45) ಯ 297ನೇ ಪ್ರಕರಣದ ಮೇರೆಗೆ ದಂಡನೀಯ ಅಪರಾಧವೆಂದು ಭಾವಿಸತಕ್ಕದ್ದಲ್ಲ.

**9. ಮಾನವ ಅಂಗಾಂಗಗಳನ್ನು ತೆಗೆಯುವುದರ ಮತ್ತು ಕಸಿ ಮಾಡುವುದರ ಬಗ್ಗೆ ನಿರ್ಬಂಧಗಳು.–** (1) (3)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ದಾನಿಯ ದೇಹದಿಂದ ಅವನು ಮೃತನಾಗುವುದಕ್ಕೆ ಮುಂಚೆ ತೆಗೆದ ಯಾವುದೇ ಮಾನವ ಅಂಗವನ್ನು, ದಾನಿಯು ತೆಗೆದುಕೊಂಡವನ ಹತ್ತಿರ ಸಂಬಂಧಿಯಾಗಿರುವ ಹೊರತು, ತೆಗೆದುಕೊಂಡವನ ದೇಹದೊಳಗೆ ಕಸಿ ಮಾಡತಕ್ಕದ್ದಲ್ಲ.

(2) ಯಾರೇ ದಾನಿಯು, 3ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ತಾನು ಮರಣ ಹೊಂದಿದ ನಂತರ ತನ್ನ ದೇಹದ ಯಾವುದೇ ಅಂಗವನ್ನು ತೆಗೆಯಲು ಅಧಿಕಾರ ನೀಡಿದ್ದಲ್ಲಿ ಅಥವಾ ಯಾರೇ ಮೃತ ವ್ಯಕ್ತಿಯ ದೇಹದಿಂದ ಯಾವುದೇ ಮಾನವ ಅಂಗವನ್ನು ತೆಗೆಯುವುದಕ್ಕಾಗಿ ಅಧಿಕಾರ ನೀಡಲು ಸಕ್ಷಮನಾದ ಅಥವಾ ಅಧಿಕಾರವುಳ್ಳ ಯಾರೇ ವ್ಯಕ್ತಿಯು ಅಂಥ ಅಂಗವನ್ನು ತೆಗೆಯುವುದಕ್ಕೆ ಅಧಿಕಾರ ನೀಡಿದ್ದಲ್ಲಿ ಮಾನವ ಅಂಗವನ್ನು ತೆಗೆಯಬಹುದು ಮತ್ತು ಅಂಥ ಮಾನವ ಅಂಗವು ಯಾರಿಗೆ ಅಗತ್ಯವಿರಬಹುದೋ ಆ ಯಾರೇ ತೆಗೆದುಕೊಂಡವನ ದೇಹದೊಳಗೆ ಕಸಿ ಮಾಡಬಹುದು.

(3) ಸ್ವೀಕರ್ತನ ಮೇಲಿರುವ ಮಮತೆ ಅಥವಾ ವಾತ್ಸಲ್ಯದ ಕಾರಣದಿಂದ ಅಥವಾ ಯಾವುದೇ ಇತರ ವಿಶೇಷ ಕಾರಣಗಳಿಗಾಗಿ ದಾನಿಯು ನಿರ್ದಿಷ್ಟಪಡಿಸಲಾದಂಥ, ಹತ್ತಿರ ಸಂಬಂಧಿಯಾಗಿರದ, ತೆಗೆದುಕೊಂಡವನ ದೇಹದೊಳಗೆ ಕಸಿ ಮಾಡುವುದಕ್ಕಾಗಿ, 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ತಾನು ಮರಣ ಹೊಂದುವುದಕ್ಕೆ ಮುಂಚೆ, ತನ್ನ ಯಾವುದೇ ಮಾನವ ಅಂಗಾಂಗಗಳನ್ನು

ತೆಗೆಯುವುದಕ್ಕಾಗಿ ಯಾರೇ ದಾನಿಯು ಅಧಿಕಾರ ನೀಡಿದ್ದರೆ, ಅಂಥ ಮಾನವ ಅಂಗವನ್ನು, ಅಧಿಕಾರ ನೀಡಿಕೆ ಸಮಿತಿಯ ಪೂರ್ವ ಅನುಮೋದನೆಯಿಲ್ಲದೆ ತೆಗೆಯತಕ್ಕದ್ದಲ್ಲ ಮತ್ತು ಕಸಿ ಮಾಡತಕ್ಕದ್ದಲ್ಲ.

(4) (ಎ) ಕೇಂದ್ರ ಸರ್ಕಾರವು, ಈ ಪ್ರಕರಣದ ಉದ್ದೇಶಗಳಿಗಾಗಿ, ಪ್ರತಿಯೊಂದು ಒಕ್ಕೂಟ ರಾಜ್ಯ ಕ್ಷೇತ್ರಗಳಿಗಾಗಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬಹುದಾದಂಥ ಸದಸ್ಯರನ್ನು ಒಳಗೊಂಡ ಒಂದು ಅಥವಾ ಹೆಚ್ಚು ಅಧಿಕಾರ ನೀಡಿಕೆ ಸಮಿತಿಗಳನ್ನು ಅಧಿಸೂಚನೆಯ ಮೂಲಕ ರಚಿಸತಕ್ಕದ್ದು.

(ಬಿ) ರಾಜ್ಯಸರ್ಕಾರವು, ಈ ಪ್ರಕರಣದ ಉದ್ದೇಶಗಳಿಗಾಗಿ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಬಹುದಾದಂಥ ಸದಸ್ಯರನ್ನು ಒಳಗೊಂಡ ಒಂದು ಅಥವಾ ಹೆಚ್ಚು ಅಧಿಕಾರ ನೀಡುವ ಸಮಿತಿಗಳನ್ನು ಅಧಿಸೂಚನೆ ಮೂಲಕ ರಚಿಸತಕ್ಕದ್ದು.

(5) ದಾನಿಯು ಮತ್ತು ತೆಗೆದುಕೊಂಡವನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ, ಜಂಟಿಯಾಗಿ ಅರ್ಜಿ ಸಲ್ಲಿಸಿದ ಮೇಲೆ, ಅಧಿಕಾರ ನೀಡಿಕೆ ಸಮಿತಿಯು, ವಿಚಾರಣೆ ನಡೆಸಿದ ತರುವಾಯ ಮತ್ತು ಈ ಅಧಿನಿಯಮದ ಹಾಗೂ ಅದರ ಮೇರೆಗೆ ರಚಿಸಿದ ನಿಯಮಗಳ ಎಲ್ಲಾ ಅಗತ್ಯತೆಗಳನ್ನು ಅರ್ಜಿದಾರರು ಪೂರೈಸಿದ್ದಾರೆಂದು ತನಗೆ ಮನವರಿಕೆಯಾದ ತರುವಾಯ, ಮಾನವ ಅಂಗಾಂಗಗಳನ್ನು ತೆಗೆಯುವುದಕ್ಕಾಗಿ ಮತ್ತು ಕಸಿ ಮಾಡುವುದಕ್ಕಾಗಿ ಅರ್ಜಿದಾರರಿಗೆ ಅನುಮೋದನೆ ನೀಡತಕ್ಕದ್ದು.

(6) ವಿಚಾರಣೆಯ ನಂತರ ಮತ್ತು ಅರ್ಜಿದಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ, ಅಧಿಕಾರ ನೀಡಿಕೆ ಸಮಿತಿಯು, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಅಗತ್ಯತೆಗಳನ್ನು ಅರ್ಜಿದಾರರು ಪೂರೈಸಿಲ್ಲವೆಂದು ತನಗೆ ಮನದಟ್ಟಾದರೆ, ಅದು, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಅನುಮೋದನೆಗಾಗಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

## ಅಧ್ಯಾಯ – III
## ಆಸ್ಪತ್ರೆಗಳ ವಿನಿಯಮನ

**10. ಮಾನವ ಅಂಗಾಂಗಗಳನ್ನು ತೆಗೆಯುವ, ಸಂಗ್ರಹಿಸುವ ಅಥವಾ ಕಸಿ ಮಾಡುವ ಆಸ್ಪತ್ರೆಗಳ ವಿನಿಯಮನ.–** (1) ಈ ಅಧಿನಿಯಮವು ಪ್ರಾರಂಭವಾಗುವ ದಿನದಂದು ಮತ್ತು ದಿನದಿಂದ,–

(ಎ) ಈ ಅಧಿನಿಯಮದ ಮೇರೆಗೆ ನೋಂದಣಿಯಾಗದಿದ್ದ, ಯಾವುದೇ ಆಸ್ಪತ್ರೆಯು ಮಾನವ ಅಂಗವನ್ನು ತೆಗೆಯುವುದನ್ನು, ಸಂಗ್ರಹಿಸುವುದನ್ನು ಅಥವಾ ಕಸಿ ಮಾಡುವುದನ್ನು ನಡೆಸತಕ್ಕದ್ದಲ್ಲ ಅಥವಾ ಅದಕ್ಕೆ ಸಹಭಾಗಿಯಾಗತಕ್ಕದ್ದಲ್ಲ ಅಥವಾ ಸಹಾಯ ಮಾಡತಕ್ಕದ್ದಲ್ಲ;

(ಬಿ) ವೈದ್ಯಕೀಯ ವೃತ್ತಿಗನು ಅಥವಾ ಯಾರೇ ಇತರ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ನೋಂದಣಿಯಾದ ಸ್ಥಳವನ್ನು ಹೊರತುಪಡಿಸಿ ಬೇರೆ ಸ್ಥಳದಲ್ಲಿ ಯಾವುದೇ ಮಾನವ ಅಂಗವನ್ನು ತೆಗೆಯುವುದಕ್ಕೆ, ಸಂಗ್ರಹಿಸುವುದಕ್ಕೆ ಅಥವಾ ಕಸಿ ಮಾಡುವುದಕ್ಕೆ ಸಂಬಂಧಿಸಿದ ಯಾವುದೇ ಕಾರ್ಯಚಟುವಟಿಕೆಯನ್ನು ನಡೆಸತಕ್ಕದ್ದಲ್ಲ ಅಥವಾ ನಡೆಯುವಂತೆ ಮಾಡತಕ್ಕದ್ದಲ್ಲ ಅಥವಾ ತಾನೇ ಸ್ವತಃ ಅಥವಾ ಯಾರೇ ಇತರ ವ್ಯಕ್ತಿಯ ಮುಖಾಂತರ ನಡೆಸುವುದಕ್ಕೆ ನೆರವು ನೀಡತಕ್ಕದ್ದಲ್ಲ; ಮತ್ತು

(ಸಿ) ಚಿಕಿತ್ಸೆಯ ಉದ್ದೇಶಗಳಿಗಾಗಿ ಹೊರತು, ಯಾವುದೇ ಮಾನವ ಅಂಗವನ್ನು ತೆಗೆಯುವುದಕ್ಕಾಗಿ, ಸಂಗ್ರಹಿಸುವುದಕ್ಕಾಗಿ ಅಥವಾ ಕಸಿ ಮಾಡುವುದಕ್ಕಾಗಿ ಯಾರೇ ವ್ಯಕ್ತಿಯು,
15ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೋಂದಣಿಯಾದ ಆಸ್ಪತ್ರೆಯೂ ಒಳಗೊಂಡಂತೆ ಯಾವುದೇ ಸ್ಥಳವನ್ನು ಬಳಸಿಕೊಳ್ಳತಕ್ಕದ್ದಲ್ಲ ಅಥವಾ ಬಳಸಿಕೊಳ್ಳುವಂತೆ ಮಾಡತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕಣ್ಣುಗಳನ್ನು ಅಥವಾ ಕಿವಿಗಳನ್ನು, ನೋಂದಾಯಿತ ವೈದ್ಯಕೀಯ ವೃತ್ತಿಗನು, ಚಿಕಿತ್ಸಾ ಉದ್ದೇಶಗಳಿಗಾಗಿ, ಯಾರೇ ದಾನಿಯ ಮೃತ ದೇಹದಿಂದ ಯಾವುದೇ ಸ್ಥಳದಲ್ಲಿ ತೆಗೆಯಬಹುದು.

**ವಿವರಣೆ:-** ಈ ಉಪ-ಪ್ರಕರಣದ ಉದ್ದೇಶಗಳಿಗಾಗಿ, "ಕಿವಿಗಳು" ಎಂಬುದು, ಕಿವಿ ತಮಟೆಗಳನ್ನು ಮತ್ತು ಕಿವಿ ಮೂಳೆಗಳನ್ನು ಒಳಗೊಳ್ಳುತ್ತವೆ.

**11. ಚಿಕಿತ್ಸೆಯ ಉದ್ದೇಶಗಳ ಹೊರತು ಬೇರೆ ಯಾವುದೇ ಉದ್ದೇಶಕ್ಕಾಗಿ ಮಾನವ ಅಂಗವನ್ನು ತೆಗೆಯುವುದಕ್ಕೆ ಅಥವಾ ಕಸಿ ಮಾಡುವುದಕ್ಕೆ ನಿಷೇಧ.-** ದಾನಿಯು ಮತ್ತು ಯಾವುದೇ ಮಾನವ ಅಂಗವನ್ನು ತೆಗೆಯುವುದಕ್ಕೆ ಅಧಿಕಾರ ನೀಡಲು ಅಧಿಕಾರ ಪಡೆದಿರುವ ಯಾರೇ ವ್ಯಕ್ತಿಯು, ಚಿಕಿತ್ಸೆಯ ಉದ್ದೇಶಗಳನ್ನು ಹೊರತುಪಡಿಸಿ ಬೇರೆ ಯಾವುದೇ ಉದ್ದೇಶಕ್ಕಾಗಿ ಯಾವುದೇ ಮಾನವ ಅಂಗವನ್ನು ತೆಗೆಯಲು ಅಧಿಕಾರ ನೀಡತಕ್ಕದ್ದಲ್ಲ.

**12. ದಾನಿಗೆ ಮತ್ತು ತೆಗೆದುಕೊಂಡವನಿಗೆ, ಪರಿಣಾಮಗಳು, ಮುಂತಾದವುಗಳನ್ನು ವಿವರಿಸುವುದು.–** ಯಾರೇ ನೋಂದಾಯಿತ ವೈದ್ಯಕೀಯ ವೃತ್ತಿಗನು, ನಿಯಮಿಸಬಹುದಾದಂಥ ನಮೂನೆಯಲ್ಲಿ, ಯಾವುದೇ ಮಾನವ ಅಂಗವನ್ನು ತೆಗೆಯುವುದಕ್ಕೆ ಮತ್ತು ಕಸಿ ಮಾಡುವುದಕ್ಕೆ ಸಂಬಂಧಿಸಿದ ಎಲ್ಲಾ ಸಂಭವನೀಯ ಪರಿಣಾಮಗಳನ್ನು, ಜಟಿಲತೆಗಳನ್ನು ಮತ್ತು ಅಪಾಯಗಳನ್ನು, ಆ ದಾನಿಗೆ ಮತ್ತು ತೆಗೆದುಕೊಂಡವನಿಗೆ ವಿವರಿಸಿದ ಹೊರತು, ಅವನು ಯಾವುದೇ ಮಾನವ ಅಂಗವನ್ನು ತೆಗೆಯತಕ್ಕದ್ದಲ್ಲ ಅಥವಾ ಕಸಿ ಮಾಡತಕ್ಕದ್ದಲ್ಲ.

## ಅಧ್ಯಾಯ – IV
## ಸಮುಚಿತ ಪ್ರಾಧಿಕಾರ

**13. ಸಮುಚಿತ ಪ್ರಾಧಿಕಾರ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ, ಪ್ರತಿಯೊಂದು ಒಕ್ಕೂಟ ರಾಜ್ಯ ಕ್ಷೇತ್ರಗಳಿಗೂ ಸಮುಚಿತ ಪ್ರಾಧಿಕಾರಿಗಳೆಂದು ಒಬ್ಬ ಅಥವಾ ಹೆಚ್ಚು ಅಧಿಕಾರಿಗಳನ್ನು ನೇಮಕ ಮಾಡತಕ್ಕದ್ದು.

(2) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ಸಮುಚಿತ ಪ್ರಾಧಿಕಾರಿಗಳೆಂದು ಒಬ್ಬ ಅಥವಾ ಹೆಚ್ಚು ಅಧಿಕಾರಿಗಳನ್ನು ನೇಮಕಮಾಡತಕ್ಕದ್ದು.

(3) ಸಮುಚಿತ ಪ್ರಾಧಿಕಾರವು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:–

(i) 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೋಂದಣಿಯನ್ನು ನೀಡುವುದು ಅಥವಾ ಆ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೋಂದಣಿಯನ್ನು ನವೀಕರಿಸುವುದು;

(ii) 16ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೋಂದಣಿಯನ್ನು ಅಮಾನತಿನಲ್ಲಿಡುವುದು ಅಥವಾ ರದ್ದುಪಡಿಸುವುದು;

(iii) ಯಾವುದೇ ಮಾನವ ಅಂಗವನ್ನು ತೆಗೆಯುವಲ್ಲಿ, ಸಂಗ್ರಹಿಸುವಲ್ಲಿ ಅಥವಾ ಕಸಿ ಮಾಡುವಲ್ಲಿ ತೊಡಗಿರುವ ಆಸ್ಪತ್ರೆಗಳಿಗಾಗಿ ನಿಯಮಿಸಬಹುದಾದಂಥ ಮಾನದಂಡಗಳನ್ನು ವಿಧಿಸುವುದು;

(iv) ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳನ್ನು ಉಲ್ಲಂಘಿಸಿದ ಬಗೆಗಿನ ಯಾವುದೇ ದೂರನ್ನು ತನಿಖೆ ಮಾಡುವುದು ಮತ್ತು ಸೂಕ್ತ ಕ್ರಮ ತೆಗೆದುಕೊಳ್ಳುವುದು;

(v) ಕಸಿ ಗುಣಮಟ್ಟದ ಪರೀಕ್ಷೆಗಾಗಿ ಮತ್ತು ಕಸಿ ಚಿಕಿತ್ಸೆಗೆ ಒಳಗಾಗಿರುವ ವ್ಯಕ್ತಿಗಳಿಗೆ ಹಾಗೂ ಯಾರಿಂದ ಅಂಗಾಂಗಗಳನ್ನು ತೆಗೆಯಲಾಗಿದೆಯೋ ಆ ವ್ಯಕ್ತಿಗಳಿಗೆ ಸತತ ವೈದ್ಯಕೀಯ ಆರೈಕೆ ಮಾಡಿರುವುದನ್ನು ಪರೀಕ್ಷಿಸುವುದಕ್ಕಾಗಿ ಆಸ್ಪತ್ರೆಗಳನ್ನು ನಿಯತಕಾಲಿಕವಾಗಿ ಪರಿಶೀಲಿಸುವುದು; ಮತ್ತು

(vi) ನಿಯಮಿಸಬಹುದಾದಂಥ ಇತರ ಕ್ರಮಗಳನ್ನು ಕೈಗೊಳ್ಳುವುದು.

## ಅಧ್ಯಾಯ – V
## ಆಸ್ಪತ್ರೆಗಳ ನೋಂದಣಿ

**14. ಮಾನವ ಅಂಗಾಂಗಗಳನ್ನು ತೆಗೆಯುವ, ಸಂಗ್ರಹಿಸುವ ಅಥವಾ ಕಸಿ ಮಾಡುವ ಕಾರ್ಯದಲ್ಲಿ ತೊಡಗಿರುವ ಆಸ್ಪತ್ರೆಯ ನೋಂದಣಿ.–** (1) ಯಾವುದೇ ಆಸ್ಪತ್ರೆಯು, ಈ ಅಧಿನಿಯಮದ ಪ್ರಾರಂಭದ ತರುವಾಯ, ಈ ಅಧಿನಿಯಮದ ಮೇರೆಗೆ ಅಂಥ ಆಸ್ಪತ್ರೆಯು ಕ್ರಮಬದ್ಧವಾಗಿ ನೋಂದಣಿಯಾದ ಹೊರತು, ಚಿಕಿತ್ಸೆಯ ಉದ್ದೇಶಗಳಿಗಾಗಿ ಯಾವುದೇ ಮಾನವ ಅಂಗವನ್ನು ತೆಗೆಯುವುದಕ್ಕೆ, ಸಂಗ್ರಹಿಸುವುದಕ್ಕೆ ಅಥವಾ ಕಸಿ ಮಾಡುವುದಕ್ಕೆ ಸಂಬಂಧಿಸಿದ ಯಾವುದೇ ಕಾರ್ಯಚಟುವಟಿಕೆಯನ್ನು ಪ್ರಾರಂಭಿಸತಕ್ಕದ್ದಲ್ಲ:

ಪರಂತು, ಈ ಅಧಿನಿಯಮವು ಪ್ರಾರಂಭವಾಗುವ ನಿಕಟ ಪೂರ್ವದಲ್ಲಿ ಚಿಕಿತ್ಸೆಯ ಉದ್ದೇಶಗಳಿಗಾಗಿ ಯಾವುದೇ ಮಾನವ ಅಂಗವನ್ನು ತೆಗೆಯುವುದಕ್ಕೆ, ಸಂಗ್ರಹಿಸುವುದಕ್ಕೆ ಅಥವಾ ಕಸಿ ಮಾಡುವುದಕ್ಕೆ ಸಂಬಂಧಿಸಿದ ಯಾವುದೇ ಕಾರ್ಯಚಟುವಟಿಕೆಯಲ್ಲಿ ಭಾಗಶಃ ಅಥವಾ ಸಂಪೂರ್ಣವಾಗಿ ನಿರತವಾಗಿರುವ ಪ್ರತಿಯೊಂದು ಆಸ್ಪತ್ರೆಯು, ಅಂಥ ಪ್ರಾರಂಭದ ದಿನಾಂಕದಿಂದ ಅರವತ್ತು ದಿವಸಗಳೊಳಗೆ ನೋಂದಣಿಗಾಗಿ ಅರ್ಜಿ ಸಲ್ಲಿಸತಕ್ಕದ್ದು:

ಮತ್ತೂ ಪರಂತು, ಯಾವುದೇ ಮಾನವ ಅಂಗವನ್ನು ತೆಗೆಯುವುದಕ್ಕೆ, ಸಂಗ್ರಹಿಸುವುದಕ್ಕೆ ಅಥವಾ ಕಸಿ ಮಾಡುವುದಕ್ಕೆ ಸಂಬಂಧಿಸಿದ ಯಾವುದೇ ಕಾರ್ಯಚಟುವಟಿಕೆಯಲ್ಲಿ ತೊಡಗಿರುವ ಪ್ರತಿಯೊಂದು ಆಸ್ಪತ್ರೆಯು, ನೋಂದಣಿಗಾಗಿ ಅಂಥ ಆಸ್ಪತ್ರೆಯು ಅರ್ಜಿ ಸಲ್ಲಿಸಿದ್ದ ಹೊರತು ಮತ್ತು ನೋಂದಣಿ

ಪ್ರಕ್ರಿಯೆ ನಡೆಯುತ್ತಿರುವ ಹೊರತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂರು ತಿಂಗಳು ಮುಕ್ತಾಯವಾದ ಮೇಲೆ ಅಥವಾ ಅಂಥ ಅರ್ಜಿಯು ವಿಲೆಯಾಗುವವರೆಗೆ, ಇವುಗಳಲ್ಲಿ ಯಾವುದು ಮುಂಚಿತವೋ ಅಲ್ಲಿಯವರೆಗೆ ಅಂಥ ಯಾವುದೇ ಕಾರ್ಯಚಟುವಟಿಕೆಯಲ್ಲಿ ತೊಡುಗುವುದು ನಿಂತುಹೋಗತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ನೋಂದಣಿಗಾಗಿನ ಪ್ರತಿಯೊಂದು ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಸಮುಚಿತ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಅಂಥ ಫೀಜು ಅದರ ಜೊತೆಗೆ ಇರತಕ್ಕದ್ದು.

(3) ಯಾವುದೇ ಆಸ್ಪತ್ರೆಯು, ನಿಯಮಿಸಬಹುದಾದಂಥ ತಜ್ಞ ಸೇವೆಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸುವ ಸ್ಥಿತಿಯಲ್ಲಿದೆಯೆಂದು, ಅಂಥ ಕುಶಲ ಮಾನವಶಕ್ತಿಯನ್ನು ಮತ್ತು ಉಪಕರಣಗಳನ್ನು ಹೊಂದಿದೆಯೆಂದು ಹಾಗೂ ಅಂಥ ಮಾನದಂಡಗಳನ್ನು ಕಾಪಾಡಿಕೊಂಡು ಬಂದಿದೆಯೆಂದು ಸಮುಚಿತ ಪ್ರಾಧಿಕಾರಕ್ಕೆ ಮನದಟ್ಟಾದ ಹೊರತು, ಅಂಥ ಆಸ್ಪತ್ರೆಯನ್ನು ಈ ಅಧಿನಿಯಮದ ಮೇರೆಗೆ ನೋಂದಣಿ ಮಾಡತಕ್ಕದ್ದಲ್ಲ.

**15. ನೋಂದಣಿ ಪ್ರಮಾಣ ಪತ್ರ.–** (1) ಸಮುಚಿತ ಪ್ರಾಧಿಕಾರವು, ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಈ ಅಧಿನಿಯಮದ ಹಾಗೂ ಅದರ ಮೇರೆಗೆ ರಚಿಸಿದ ನಿಯಮಗಳ ಎಲ್ಲಾ ಅಗತ್ಯತೆಗಳನ್ನು ಅರ್ಜಿದಾರನು ಪೂರೈಸಿದ್ದಾನೆಂದು ಸ್ವತಃ ಮನದಟ್ಟು ಮಾಡಿಕೊಂಡ ತರುವಾಯ, ಆ ಆಸ್ಪತ್ರೆಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ಅವಧಿಗಾಗಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ನೋಂದಣಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

(2) ವಿಚಾರಣೆಯ ನಂತರ ಮತ್ತು ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ, ಸಮುಚಿತ ಪ್ರಾಧಿಕಾರಕ್ಕೆ, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಅಗತ್ಯತೆಯನ್ನು ಅರ್ಜಿದಾರನು ಪೂರೈಸಿಲ್ಲವೆಂದು ಮನದಟ್ಟಾದರೆ, ಅದು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ನೋಂದಣಿಗಾಗಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಬಹುದು.

(3) ಪ್ರತಿಯೊಂದು ನೋಂದಣಿ ಪ್ರಮಾಣಪತ್ರವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಫೀಜನ್ನು ಸಂದಾಯ ಮಾಡಿದ ಮೇಲೆ ನವೀಕರಿಸತಕ್ಕದ್ದು.

**16. ನೋಂದಣಿಯ ಅಮಾನತು ಅಥವಾ ರದ್ದು.–** (1) ಸಮುಚಿತ ಪ್ರಾಧಿಕಾರವು, ತಾನಾಗಿಯೇ ಅಥವಾ ದೂರಿನ ಮೇಲೆ, ಯಾವುದೇ ಆಸ್ಪತ್ರೆಗೆ, ನೋಟೀಸಿನಲ್ಲಿ ಹೇಳಿದ ಕಾರಣಗಳಿಗಾಗಿ ಈ ಅಧಿನಿಯಮದ ಮೇರೆಗೆ ಮಾಡಿದ ಅದರ ನೋಂದಣಿಯನ್ನು ಏಕೆ ಅಮಾನತುಗೊಳಿಸಬಾರದು ಅಥವಾ ರದ್ದು ಮಾಡಬಾರದು ಎಂಬುದಕ್ಕೆ ಕಾರಣವನ್ನು ತೋರಿಸುವಂತೆ ನೋಟೀಸು ನೀಡಬಹುದು.

(2) ಅಹವಾಲನ್ನು ಹೇಳಿಕೊಳ್ಳಲು ಆಸ್ಪತ್ರೆಗೆ ಯುಕ್ತ ಅವಕಾಶವನ್ನು ನೀಡಿದ ತರುವಾಯ, ಈ ಅಧಿನಿಯಮದ ಉಪಬಂಧಗಳ ಪೈಕಿ ಯಾವುದೇ ಉಪಬಂಧವನ್ನು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಪೈಕಿ ಯಾವುದೇ ನಿಯಮವನ್ನು ಉಲ್ಲಂಘಿಸಲಾಗಿದೆಯೆಂದು ಸಮುಚಿತ ಪ್ರಾಧಿಕಾರಕ್ಕೆ ಮನದಟ್ಟಾದರೆ, ಅಂಥ ಆಸ್ಪತ್ರೆಯ ವಿರುದ್ಧ ತೆಗೆದುಕೊಳ್ಳಬಹುದಾದ ಯಾವುದೇ ಕ್ರಿಮಿನಲ್ ಕ್ರಮಕ್ಕೆ ಬಾಧಕವಾಗದಂತೆ, ಅದು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಅವಧಿಗೆ ಅದರ ನೋಂದಣಿಯನ್ನು ಅಮಾನತಿನಲ್ಲಿಡಬಹುದು ಅಥವಾ ಅದರ ನೋಂದಣಿಯನ್ನು ರದ್ದುಗೊಳಿಸಬಹುದು:

ಪರಂತು, ಸಾರ್ವಜನಿಕ ಹಿತದೃಷ್ಟಿಯಿಂದ ಯಾವುದೇ ನೋಟೀಸನ್ನು ನೀಡದೆ ಯಾವುದೇ ಆಸ್ಪತ್ರೆಯ ನೋಂದಣಿಯನ್ನು ಅಮಾನತ್ತಿನಲ್ಲಿಡುವುದು ಅಗತ್ಯವೆಂದು ಅಥವಾ ವಿಹಿತವೆಂದು ಸಮುಚಿತ ಪ್ರಾಧಿಕಾರವು ಅಭಿಪ್ರಾಯಪಟ್ಟರೆ, ಅದು, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಹಾಗೆ ಮಾಡಬಹುದು.

**17. ಅಪೀಲುಗಳು.–** 9ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಅನುಮೋದನೆಗಾಗಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುವ ಅಧಿಕಾರ ನೀಡಿಕೆ ಸಮಿತಿಯ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ಅಥವಾ 15ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೋಂದಣಿಗಾಗಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುವ ಸಮುಚಿತ ಪ್ರಾಧಿಕಾರದ ಆದೇಶದಿಂದ ಬಾಧಿತವಾದ ಅಥವಾ 16ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೋಂದಣಿಯನ್ನು ಅಮಾನತ್ತಿನಲ್ಲಿಟ್ಟಿರುವ ಅಥವಾ ರದ್ದುಪಡಿಸಿರುವ ಆದೇಶದಿಂದ ಬಾಧಿತವಾದ ಯಾವುದೇ ಅಸ್ಪತ್ರೆಯು, ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ, ಅಂಥ ಆದೇಶದ ವಿರುದ್ಧ, ನಿಯಮಿಸಬಹುದಾದಂಥ ರೀತಿಯಲ್ಲಿ, ಅಪೀಲನ್ನು,–

(i) ಆ ಅಪೀಲು, 9ನೇ ಪ್ರಕರಣದ (4)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ರಚಿತವಾದ ಅಧಿಕಾರ ನೀಡಿಕೆ ಸಮಿತಿಯ ಆದೇಶದ ವಿರುದ್ಧವಾಗಿರುವಲ್ಲಿ ಅಥವಾ 13ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೇಮಕವಾದ ಸಮುಚಿತ ಪ್ರಾಧಿಕಾರದ ಆದೇಶದ ವಿರುದ್ಧವಾಗಿರುವಲ್ಲಿ, ಕೇಂದ್ರ ಸರ್ಕಾರಕ್ಕೆ; ಅಥವಾ

(ii) ಆ ಅಪೀಲು, 9ನೇ ಪ್ರಕರಣದ (4)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ರಚಿತವಾದ ಅಧಿಕಾರ ನೀಡಿಕೆ ಸಮಿತಿಯ ಆದೇಶದ ವಿರುದ್ಧವಾಗಿರುವಲ್ಲಿ ಅಥವಾ 13ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೇಮಕವಾದ ಸಮುಚಿತ ಪ್ರಾಧಿಕಾರದ ಆದೇಶದ ವಿರುದ್ಧವಾಗಿರುವಲ್ಲಿ, ರಾಜ್ಯ ಸರ್ಕಾರಕ್ಕೆ

– ಸಲ್ಲಿಸಬಹುದು.

## ಅಧ್ಯಾಯ – VI
## ಅಪರಾಧಗಳು ಮತ್ತು ದಂಡನೆಗಳು

**18. ಅಧಿಕಾರವಿಲ್ಲದೆ ಮಾನವ ಅಂಗವನ್ನು ತೆಗೆಯುವುದಕ್ಕೆ ಶಿಕ್ಷೆ.–** (1) ಯಾವುದೇ ಆಸ್ಪತ್ರೆಗೆ ಅಥವಾ ಯಾವುದೇ ಆಸ್ಪತ್ರೆಯಲ್ಲಿ ತನ್ನ ಸೇವೆಗಳನ್ನು ಸಲ್ಲಿಸುತ್ತಿರುವ ಮತ್ತು ಕಸಿ ಮಾಡುವ ಉದ್ದೇಶಗಳಿಗಾಗಿ, ಅಧಿಕಾರವಿಲ್ಲದೆ ಯಾವುದೇ ಮಾನವ ಅಂಗವನ್ನು ತೆಗೆಯುವ ಕಾರ್ಯವನ್ನು ಮಾಡುತ್ತಿರುವ, ಅದರಲ್ಲಿ ಭಾಗಿಯಾಗಿರುವ ಅಥವಾ ಯಾವುದೇ ರೀತಿಯಲ್ಲಿ ಆ ಕಾರ್ಯಕ್ಕೆ ಸಹಾಯ ನೀಡುತ್ತಿರುವ ಯಾರೇ ವ್ಯಕ್ತಿಯು, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಅಪರಾಧ ನಿರ್ಣೀತನಾದ ಯಾರೇ ವ್ಯಕ್ತಿಯು ನೋಂದಾಯಿತ ವೈದ್ಯಕೀಯ ವೃತ್ತಿಗನಾಗಿದ್ದಲ್ಲಿ, ಅವನ ಹೆಸರನ್ನು, ಮೊದಲ ಅಪರಾಧಕ್ಕಾಗಿ ಎರಡು ವರ್ಷಗಳ ಅವಧಿಗೆ ಮತ್ತು ತರುವಾಯದ ಅಪರಾಧಕ್ಕಾಗಿ ಖಾಯಂ ಆಗಿ ಪರಿಷತ್ತಿನ ರಿಜಿಸ್ಟರಿನಿಂದ ಅವನ ಹೆಸರನ್ನು ತೆಗೆದು ಹಾಕುವುದೂ ಸೇರಿದಂತೆ ಅಗತ್ಯ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗಿ ಸಮುಚಿತ ಪ್ರಾಧಿಕಾರವು ಸಂಬಂಧಪಟ್ಟ ರಾಜ್ಯ ವೈದ್ಯಕೀಯ ಪರಿಷತ್ತಿಗೆ ಅವನ ಹೆಸರನ್ನು ಕಳುಹಿಸತಕ್ಕದ್ದು.

**19. ಮಾನವ ಅಂಗಾಂಗಗಳ ವಾಣಿಜ್ಯ ವ್ಯವಹಾರ ಮಾಡುವುದಕ್ಕೆ ದಂಡನೆ.–** ಯಾರಾದರೂ,–

(ಎ) ಯಾವುದೇ ಮಾನವ ಅಂಗವನ್ನು ಪೂರೈಕೆ ಮಾಡುವುದಕ್ಕೆ ಅಥವಾ ಪೂರೈಕೆ ಮಾಡಲು ಪ್ರಸ್ತಾವಿಸುವುದಕ್ಕೆ ಯಾವುದೇ ಸಂದಾಯವನ್ನು ಮಾಡಿದರೆ ಅಥವಾ ಸ್ವೀಕರಿಸಿದರೆ;

(ಬಿ) ಹಣ ಸಂದಾಯಕ್ಕೆ ಪ್ರತಿಯಾಗಿ ಯಾವುದೇ ಮಾನವ ಅಂಗವನ್ನು ಪೂರೈಸಲು ಇಚ್ಛಿಸುವ ವ್ಯಕ್ತಿಯನ್ನು ಅರಸುತ್ತಿದ್ದರೆ;

(ಸಿ) ಹಣ ಸಂದಾಯಕ್ಕೆ ಪ್ರತಿಯಾಗಿ ಯಾವುದೇ ಮಾನವ ಅಂಗವನ್ನು ಪೂರೈಸಲು ಪ್ರಸ್ತಾಪಿಸಿದರೆ;

(ಡಿ) ಯಾವುದೇ ಮಾನವ ಅಂಗದ ಪೂರೈಕೆಗಾಗಿ ಅಥವಾ ಪೂರೈಕೆ ಮಾಡುವುದಕ್ಕೆ ಪ್ರಸ್ತಾಪಿಸಿದಕ್ಕಾಗಿ ಯಾವುದೇ ಹಣ ಸಂದಾಯ ಮಾಡುವುದನ್ನು ಒಳಗೊಂಡ ಯಾವುದೇ ವ್ಯವಸ್ಥೆಯನ್ನು ಪ್ರಾರಂಭಿಸಿದರೆ ಅಥವಾ ಮಾತುಕತೆ ನಡೆಸಿದರೆ;

(ಇ) ಯಾರ ಕಾರ್ಯಚಟುವಟಿಕೆಗಳಲ್ಲಿ (ಡಿ) ಖಂಡದಲ್ಲಿ ಉಲ್ಲೇಖಿಸಿದ ಯಾವುದೇ ವ್ಯವಸ್ಥೆಯ ಪ್ರಾರಂಭವು ಅಥವಾ ಮಾತುಕತೆ ನಡೆಸುವುದು ಒಳಗೊಂಡಿದೆಯೋ ಅಥವಾ ಸೇರಿದೆಯೋ ಆ ವ್ಯಕ್ತಿಗಳ ನಿಕಾಯದ, ಅದು ಸಂಘವಾಗಿರಲಿ, ಫರ್ಮ ಆಗಿರಲಿ ಅಥವಾ ಕಂಪನಿಯಾಗಿರಲಿ ಅದರ ವ್ಯವಸ್ಥಾಪನೆಯಲ್ಲಿ ಅಥವಾ ನಿಯಂತ್ರಣದಲ್ಲಿ ಭಾಗಿಯಾಗಿದ್ದರೆ; ಅಥವಾ

(ಎಫ್) (ಎ) ಹಣ ಸಂದಾಯಕ್ಕೆ ಪ್ರತಿಯಾಗಿ ಯಾವುದೇ ಮಾನವ ಅಂಗವನ್ನು ಪೂರೈಕೆ ಮಾಡಲು ವ್ಯಕ್ತಿಗಳನ್ನು ಆಹ್ವಾನಿಸುವ;

(ಬಿ) ಹಣ ಸಂದಾಯಕ್ಕೆ ಪ್ರತಿಯಾಗಿ ಯಾವುದೇ ಮಾನವ ಅಂಗವನ್ನು ಪೂರೈಕೆ ಮಾಡಲು ಪ್ರಸ್ತಾವಿಸುವ; ಅಥವಾ

(ಸಿ) (ಡಿ) ಖಂಡದಲ್ಲಿ ಉಲ್ಲೇಖಿಸಿದ ಯಾವುದೇ ವ್ಯವಸ್ಥೆಯನ್ನು ಪ್ರಾರಂಭಿಸಲು ಅಥವಾ ಮಾತುಕತೆ ನಡೆಸಲು ಜಾಹೀರಾತುದಾರನು ಇಚ್ಛಿಸುತ್ತಿದ್ದಾನೆಂಬುದನ್ನು ಸೂಚಿಸುವ

– ಯಾವುದೇ ಜಾಹೀರಾತನ್ನು ಪ್ರಕಟಿಸಿದರೆ ಅಥವಾ ಹಂಚಿದರೆ ಅಥವಾ ಪ್ರಕಟಿಸುವಂತೆ ಮಾಡಿದರೆ ಅಥವಾ ಹಂಚುವಂತೆ ಮಾಡಿದರೆ, ಅವನು ಎರಡು ವರ್ಷಗಳಿಗಿಂತ ಕಡಿಮೆಯಿರದ ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಹತ್ತುಸಾವಿರ

ರೂಪಾಯಿಗಳಿಗಿಂತ ಕಡಿಮೆಯಿರದ ಆದರೆ ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಗುರಿಯಾಗತಕ್ಕದ್ದು:

ಪರಂತು, ನ್ಯಾಯಾಲಯವು, ತೀರ್ಪಿನಲ್ಲಿ ಸೂಚಿಸಬೇಕಾದ ಯಾವುದೇ ಯುಕ್ತ ಮತ್ತು ವಿಶೇಷ ಕಾರಣಕ್ಕಾಗಿ, ಎರಡು ವರ್ಷಗಳಿಗಿಂತ ಕಡಿಮೆ ಅವಧಿಗೆ ಕಾರಾವಾಸವನ್ನು ಮತ್ತು ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಜುಲ್ಮಾನೆಯನ್ನು ವಿಧಿಸಬಹುದು.

**20. ಈ ಅಧಿನಿಯಮದ ಯಾವುದೇ ಇತರ ಉಪಬಂಧದ ಉಲ್ಲಂಘನೆಗಾಗಿ ದಂಡನೆ.–** ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಅಥವಾ ಮಂಜೂರು ಮಾಡಿದ ನೋಂದಣಿಯ ಯಾವುದೇ ಷರತ್ತನ್ನು ಉಲ್ಲಂಘಿಸಿದ್ದಕ್ಕಾಗಿ ಈ ಅಧಿನಿಯಮದಲ್ಲಿ ಪ್ರತ್ಯೇಕವಾಗಿ ಯಾವುದೇ ದಂಡನೆಯನ್ನು ಉಪಬಂಧಿಸಿಲ್ಲವೋ, ಅದನ್ನು ಉಲ್ಲಂಘಿಸುವ ಯಾರಾದರೂ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**21. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ, ಕಂಪನಿಯ ವ್ಯವಹಾರ ನಡೆಸುವುದಕ್ಕಾಗಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು, ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಆ ಅಪರಾಧವು ತನ್ನ ಅರಿವಿಗೆ ಬಾರದೆ ನಡೆದಿದೆಯೆಂದೂ ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಯಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅವನು ರುಜುವಾತುಪಡಿಸಿದರೆ, ಈ ಉಪ–ಪ್ರಕರಣದಲ್ಲಿರುವುದು ಯಾವುದೂ, ಅಂಥ ಯಾರೇ ವ್ಯಕ್ತಿಯನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ, ಅಥವಾ ಅವನ

ಯಾವುದೇ ನಿರ್ಲಕ್ಷ್ಯತೆಯಿಂದ ನಡೆಯಿತೆಂದು ಆರೋಪಿಸಬಹುದಾಗಿರುವಲ್ಲಿ ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಎಂದು ಅರ್ಥ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುದಾರ.

**22. ಅಪರಾಧದ ಸಂಜ್ಞೇಯತೆ.–** (1) ಯಾವುದೇ ನ್ಯಾಯಾಲಯವು,–

(ಎ) ಸಂಬಂಧಪಟ್ಟ ಸಮುಚಿತ ಪ್ರಾಧಿಕಾರವು ಅಥವಾ ಈ ಬಗ್ಗೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರ ಸಮುಚಿತ ಪ್ರಾಧಿಕಾರವು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು; ಅಥವಾ

(ಬಿ) ಆರೋಪಿಸಲಾದ, ಅಪರಾಧದ ಬಗ್ಗೆ ಮತ್ತು ನ್ಯಾಯಾಲಯಕ್ಕೆ ದೂರನ್ನು ಸಲ್ಲಿಸುವ ತನ್ನ ಉದ್ದೇಶದ ಬಗ್ಗೆ, ಸಂಬಂಧಪಟ್ಟ ಸಮುಚಿತ ಪ್ರಾಧಿಕಾರಕ್ಕೆ ನಿಯಮಿಸಬಹುದಾದಂಥ ರೀತಿಯಲ್ಲಿ, ಅರವತ್ತು ದಿವಸಗಳಿಗಿಂತ ಕಡಿಮೆಯಲ್ಲದ ನೋಟೀಸನ್ನು ನೀಡಿದ ವ್ಯಕ್ತಿಯು

– ದೂರು ಸಲ್ಲಿಸಿದ್ದ ಹೊರತು ಈ ಅಧಿನಿಯಮದ ಮೇರೆಗಿನ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯವನ್ನು ಹೊರತುಪಡಿಸಿ ಯಾವುದೇ ನ್ಯಾಯಾಲಯವು ಅಧಿವಿಚಾರಣೆ ನಡೆಸತಕ್ಕದ್ದಲ್ಲ.

(3) (1)ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗೆ ದೂರು ಸಲ್ಲಿಸಿರುವಲ್ಲಿ, ನ್ಯಾಯಾಲಯವು, ಅಂಥ ವ್ಯಕ್ತಿಯ ಕೋರಿಕೆಯ ಮೇಲೆ, ಸಮುಚಿತ ಪ್ರಾಧಿಕಾರವು ತನ್ನ ಸ್ವಾಧೀನದಲ್ಲಿರುವ ಸಂಬಂಧಪಟ್ಟ ದಾಖಲೆಯ ಪ್ರತಿಗಳನ್ನು ಆ ವ್ಯಕ್ತಿಗೆ ದೊರೆಯುವಂತೆ ಮಾಡಬೇಕೆಂದು ಆ ಪ್ರಾಧಿಕಾರಕ್ಕೆ ನಿರ್ದೇಶಿಸಬಹುದು.

## ಅಧ್ಯಾಯ VII
### ಸಂಕೀರ್ಣ

**23. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** (1) ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಯಾರೇ ವ್ಯಕ್ತಿಯ ವಿರುದ್ಧ ಹೂಡತಕ್ಕದ್ದಲ್ಲ.

(2) ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗೆ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**24. ನಿಯಮಗಳನ್ನು ರಚಿಸುವ ಅಧಿಕಾರ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:–

(ಎ) ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಯಾರೇ ದಾನಿಯು, ತಾನು ಮೃತನಾಗುವುದಕ್ಕೆ ಮುಂಚೆ ತನ್ನ ದೇಹದ ಯಾವುದೇ ಮಾನವ ಅಂಗವನ್ನು ತೆಗೆಯಲು ಅಧಿಕಾರ ನೀಡಬಹುದೋ ಆ ರೀತಿ ಮತ್ತು ಆ ಷರತ್ತುಗಳು;

(ಬಿ) ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ 3ನೇ ಪ್ರಕರಣದ (6)ನೇ ಉಪ–ಪ್ರಕರಣದ ಮೇರೆಗೆ ಆ ಉದ್ದೇಶಕ್ಕಾಗಿ ಮಿದುಳು–ಕಾಂಡ ಸಾವನ್ನು ಪ್ರಮಾಣೀಕರಿಸಬೇಕೋ ಆ ನಮೂನೆ ಮತ್ತು ಆ ರೀತಿ ಮತ್ತು ಯಾವ ಷರತ್ತುಗಳನ್ನು ಮತ್ತು ಅಗತ್ಯತೆಗಳನ್ನು ಪೂರೈಸಬೇಕೋ ಆ ಷರತ್ತುಗಳು ಮತ್ತು ಅಗತ್ಯತೆಗಳು;

(ಸಿ) ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ 3ನೇ ಪ್ರಕರಣದ (7)ನೇ ಉಪ–ಪ್ರಕರಣದ ಮೇರೆಗೆ ಅಪ್ರಾಪ್ತ ವಯಸ್ಕನ ಮಿದುಳು–ಕಾಂಡ ಸಾವಿನ ಸಂದರ್ಭದಲ್ಲಿ, ಯಾವುದೇ ಮಾನವ ಅಂಗವನ್ನು ತೆಗೆಯುವುದಕ್ಕಾಗಿ ತಂದೆ–ತಾಯಿಯರಲ್ಲಿ ಯಾರಾದರೂ ಅಧಿಕಾರ ನೀಡಬಹುದೋ ಆ ನಮೂನೆ ಮತ್ತು ಆ ರೀತಿ;

(ಡಿ) 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಕ್ಲೇಮು ಮಾಡಿಲ್ಲದ ಮೃತದೇಹದಿಂದ ಯಾವುದೇ ಮಾನವ ಅಂಗವನ್ನು ತೆಗೆಯುವುದಕ್ಕಾಗಿ, ಆಸ್ಪತ್ರೆ ಅಥವಾ ಬಂಧೀಖಾನೆಯ ವ್ಯವಸ್ಥಾಪನೆಯ ಅಥವಾ ನಿಯಂತ್ರಣದ ಪ್ರಭಾರದಲ್ಲಿರುವ ವ್ಯಕ್ತಿಯು ಯಾವ ನಮೂನೆಯಲ್ಲಿ ಅಧಿಕಾರ ನೀಡಬಹುದೋ ಆ ನಮೂನೆ;

(ಇ) 7ನೇ ಪ್ರಕರಣದ ಮೇರೆಗೆ, ಯಾವುದೇ ವ್ಯಕ್ತಿಯ ದೇಹದಿಂದ ತೆಗೆದ ಮಾನವ ಅಂಗದ ಸಂರಕ್ಷಣೆಗಾಗಿ ತೆಗೆದುಕೊಳ್ಳಬೇಕಾದ ಕ್ರಮಗಳು;

(ಎಫ್) ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ 9ನೇ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗೆ ದಾನಿ ಮತ್ತು ತೆಗೆದುಕೊಂಡವನು – ಇಬ್ಬರೂ ಜಂಟಿಯಾಗಿ ಅರ್ಜಿಯನ್ನು ಸಲ್ಲಿಸಬಹುದೋ ಆ ನಮೂನೆ ಮತ್ತು ಆ ರೀತಿ;

(ಜಿ) ಯಾವ ರೀತಿಯಲ್ಲಿ 12ನೇ ಪ್ರಕರಣದ ಮೇರೆಗೆ ನೋಂದಣಿಯಾದ ವೈದ್ಯಕೀಯ ವೃತ್ತಿಗನು ದಾನಿಗೆ ಮತ್ತು ತೆಗೆದುಕೊಂಡವನಿಗೆ, ತೆಗೆಯುವ ಮತ್ತು ಕಸಿ ಮಾಡುವ ಸಂಬಂಧ ಇರುವ ಎಲ್ಲಾ ಸಂಭವನೀಯ ಪರಿಣಾಮಗಳು, ಜಟಿಲತೆಗಳು ಮತ್ತು ಅಪಾಯಗಳನ್ನು ವಿವರಿಸಬೇಕೋ ಆ ರೀತಿ;

(ಹೆಚ್) ಯಾವುದೇ ಮಾನವ ಅಂಗವನ್ನು ತೆಗೆಯುವಲ್ಲಿ, ಸಂಗ್ರಹಿಸುವಲ್ಲಿ ಅಥವಾ ಕಸಿ ಮಾಡುವಲ್ಲಿ ತೊಡಗಿರುವ ಆಸ್ಪತ್ರೆಗಳಿಗಾಗಿ ಸಮುಚಿತ ಪ್ರಾಧಿಕಾರವು 13ನೇ ಪ್ರಕರಣದ (3)ನೇ ಉಪ–ಪ್ರಕರಣದ (iii)ನೇ ಖಂಡದ ಮೇರೆಗೆ ವಿಧಿಸಬೇಕಾದ ಮಾನದಂಡಗಳು;

(ಐ) 13ನೇ ಪ್ರಕರಣದ (3)ನೇ ಉಪ–ಪ್ರಕರಣದ (vi) ನೇ ಖಂಡದ ಮೇರೆಗೆ ಸಮುಚಿತ ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ತೆಗೆದುಕೊಳ್ಳತಕ್ಕ ಇತರ ಕ್ರಮಗಳು;

(ಜೆ) ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ 14ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಬೇಕೋ ಆ ನಮೂನೆ ಮತ್ತು ಆ ರೀತಿ ಮತ್ತು ಅದರೊಂದಿಗೆ ಇರತಕ್ಕ ಫೀಜು;

(ಕೆ) 14ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ನೋಂದಣಿಗಾಗಿ ಆಸ್ಪತ್ರೆಯು ಒದಗಿಸಬೇಕಾದ ತಜ್ಞ ಸೇವೆಗಳು ಮತ್ತು ಸೌಲಭ್ಯಗಳು, ಹೊಂದಿರಬೇಕಾದ ಕುಶಲ ಮಾನವ ಶಕ್ತಿ ಮತ್ತು ಉಪಕರಣಗಳು ಹಾಗೂ ಕಾಪಾಡಿಕೊಳ್ಳಬೇಕಾದ ಮಾನದಂಡಗಳು;

(ಎಲ್) ಯಾವ ನಮೂನೆಯಲ್ಲಿ, ಯಾವ ಅವಧಿಗೆ ಮತ್ತು ಯಾವ ಷರತ್ತಿಗೆ ಒಳಪಟ್ಟು 15ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಆಸ್ಪತ್ರೆಗೆ ನೋಂದಣಿ ಪ್ರಮಾಣ ಪತ್ರವನ್ನು ನೀಡಬೇಕಾಗಿದೆಯೋ ಆ ನಮೂನೆ, ಆ ಅವಧಿ ಮತ್ತು ಆ ಷರತ್ತುಗಳು;

(ಎಮ್) ಯಾವ ರೀತಿಯಲ್ಲಿ ಮತ್ತು ಯಾವ ಫೀಜನ್ನು ಸಂದಾಯ ಮಾಡಿದ ಮೇಲೆ 15ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ನೋಂದಣಿ ಪ್ರಮಾಣಪತ್ರವನ್ನು ನವೀಕರಿಸಬೇಕೋ ಆ ರೀತಿ ಮತ್ತು ಆ ಫೀಜು;

(ಎನ್) ಯಾವ ರೀತಿಯಲ್ಲಿ 17ನೇ ಪ್ರಕರಣದ ಮೇರೆಗೆ ಅಪೀಲನ್ನು ಹೂಡಬಹುದೋ ಆ ರೀತಿ;

(ಓ) 22ನೇ ಪ್ರಕರಣದ (1)ನೇ ಉಪ–ಪ್ರಕರಣದ (ಬಿ) ಖಂಡದ ಮೇರೆಗೆ, ಆರೋಪಿಸಲಾದ ಅಪರಾಧದ ಬಗ್ಗೆ ಮತ್ತು ನ್ಯಾಯಾಲಯಕ್ಕೆ ದೂರು ಸಲ್ಲಿಸುವ ತನ್ನ ಉದ್ದೇಶದ ಬಗ್ಗೆ ವ್ಯಕ್ತಿಯು ಯಾವ ರೀತಿಯಲ್ಲಿ ಸಮುಚಿತ ಪ್ರಾಧಿಕಾರಕ್ಕೆ ನೋಟೀಸನ್ನು ನೀಡಲು ಅಗತ್ಯಪಡಿಸಲಾಗಿದೆಯೋ ಆ ರೀತಿ; ಮತ್ತು

(ಪಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂತಹ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು, ಮತ್ತು ಮೇಲೆ ಹೇಳಿದ ಅಧಿವೇಶನಕ್ಕೆ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ, ಆ ನಿಯಮವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**25. ನಿರಸನ ಮತ್ತು ಉಳಿಸುವಿಕೆಗಳು.–** (1) ಕಿವಿ ತಮಟೆಗಳು ಮತ್ತು ಕಿವಿ ಮೂಳೆಗಳ (ಚಿಕಿತ್ಸಾ ಉದ್ದೇಶಗಳಿಗಾಗಿ ಬಳಸುವ ಅಧಿಕಾರ) ಅಧಿನಿಯಮ, 1982 (1982 ರ 28) ಮತ್ತು ಕಣ್ಣುಗಳ (ಚಿಕಿತ್ಸಾ ಉದ್ದೇಶಗಳಿಗಾಗಿ ಬಳಸುವ ಅಧಿಕಾರ) ಅಧಿನಿಯಮ, 1982 (1982 ರ 29) ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಆದಾಗ್ಯೂ, ಆ ನಿರಸನವು, ಹಾಗೆ ನಿರಸನಗೊಳಿಸಿದ ಅಧಿನಿಯಮಗಳನ್ನು ಹಿಂದೆ ಜಾರಿಗೊಳಿಸಿರುವುದಕ್ಕೆ ಅಥವಾ ಅದರ ಮೇರೆಗೆ ಯುಕ್ತವಾಗಿ ಮಾಡಿದ ಅಥವಾ ಅನುಮತಿಸಿದ ಯಾವುದೇ ಕಾರ್ಯಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

* * *

Govt. Press, Bangalore, P7, W.D:283 , Copies: 150